ಅಧ್ಯಾತ್ಮಗ್ರಂಥಾವಳಿ

# ಈಶಾವಾಸ್ಯೋಪನ್ಯಾಸಮಂಜರಿ

(ಈಶಾವಾಸ್ಯೋಪನಿಷತ್ತಿನ ಲಲಿತವಾದ ವಿವರಣೆ)

ಬರೆದವರು :
**ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು**

ಸಂಪಾದಕ :
**ಹೆಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ**

ಕ್ರಮಾಂಕ ೧೯೯

ಪ್ರಕಾಶಕರು :
**ಅಧ್ಯಾತ್ಮಪ್ರಕಾಶಕಾರ್ಯಾಲಯ**
ಹೊಳೆನರಸೀಪುರ.
೨೦೦೧

# ಮುನ್ನುಡಿ

ಬ್ರಹ್ಮೀಭೂತ ಶ್ರೀಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು ಶ್ರೀಶಂಕರಭಗವತ್ಪಾದರ ಪ್ರಸ್ಥಾನತ್ರಯಭಾಷ್ಯಗಳನ್ನೆಲ್ಲ ಕನ್ನಡಾನುವಾದಸಹಿತ ಬರೆದು ಪ್ರಕಟಿಸಿದ ಮೇಲೂ ಜಿಜ್ಞಾಸುಗಳಿಗೆ ಅನುಕೂಲವಾಗಲೆಂದು ಕೆಲವು ಉಪನಿಷತ್ತುಗಳ ಭಾಷ್ಯಾರ್ಥವನ್ನು ವಿವರಿಸಿ ತಿಳಿಸುವ ಮಂಜರಿಗಳೆಂಬ ಗ್ರಂಥಗಳನ್ನು ಬರೆದು ಪ್ರಕಟಿಸಿದ್ದರು. ಈ ಗ್ರಂಥಮಾಲೆಯಲ್ಲಿ ಈಶಾವಾಸ್ಯೋಪನ್ಯಾಸ ಮಂಜರಿಯೂ ಅಡಕವಾಗಿದ್ದು 1992ರಲ್ಲಿ ಪ್ರಥಮ ಮುದ್ರಣವಾಗಿದ್ದು ಪ್ರತಿಗಳೆಲ್ಲ ಮುಗಿದುಹೋಗಿದ್ದುದರಿಂದ ಈಗ ಎರಡನೆಯ ಬಾರಿಗೆ ಮುದ್ರಿತವಾಗಿ ವಾಚಕರ ಕರಕಮಲವನ್ನು ಅಲಂಕರಿಸಿರುತ್ತದೆ.

ದಕ್ಷಿಣದೇಶದ ಆಚಾರ್ಯತ್ರಯರಲ್ಲಿ ಉಪನಿಷತ್ತುಗಳಿಗೆ ಸ್ವತಂತ್ರವಾಗಿ ಬಿಡಿಬಿಡಿಯಾಗಿ ವಿವರವಾದ ಭಾಷ್ಯಗಳನ್ನು ರಚಿಸಿರುವವರು ಶ್ರೀಶಂಕರಾ-ಚಾರ್ಯರು ಒಬ್ಬರೇ, ಎಂಬುದು ಸರ್ವರಿಗೂ ತಿಳಿದ ವಿಚಾರವೇ ಆಗಿದೆ. ಪ್ರಸ್ಥಾನತ್ರಯಗಳಲ್ಲಿ ಸಿದ್ಧಾಂತಪ್ರಸ್ಥಾನವೆನಿಸಿರುವ ದಶೋಪನಿಷತ್ತುಗಳಲ್ಲಿ ಈಶಾವಾಸ್ಯವೇ ಅತಿಚಿಕ್ಕದು ಮತ್ತು ಕಾಣ್ವ – ಮಾಧ್ಯಂದಿನ ಎಂಬ ಎರಡು ಬಗೆಯ ಪಾಠಕ್ರಮವೂ ಇದರ ವೈಶಿಷ್ಟ್ಯವಾಗಿದೆ. ವಿಷಯಪ್ರತಿಪಾದನೆಯಲ್ಲಿ ಕರ್ಮೋಪಾಸನೆಗಳ ವಿಚಾರಗಳಲ್ಲದೆ ಪರಿಶುದ್ಧವಾದ ಆತ್ಮತತ್ತ್ವವನ್ನು ಸ್ವತಂತ್ರವಾಗಿ ಪ್ರತಿಪಾದಿಸಲಾಗಿದೆ. ಜ್ಞಾನಕರ್ಮಸಮುಚ್ಚಯವಾದವನ್ನು ಮೋಕ್ಷಸಾಧನವೆಂದು ಹೇಳುತ್ತಿದ್ದ ಪೂರ್ವಪಕ್ಷಿಗಳನ್ನು ನಿರಾಕರಿಸಲಾಗಿದೆ. ಜ್ಞಾನದ ಫಲವು ಬದುಕಿರುವಾಗಲೇ ಪಡೆಯತಕ್ಕದ್ದೆಂದೂ ಕರ್ಮೋಪಾಸನಾಫಲಗಳಂತೆ ಜನ್ಮಾಂತರಲೋಕಾಂತರಗಳಲ್ಲಿ ಪಡೆಯತಕ್ಕದ್ದಲ್ಲವೆಂದೂ ಇದು ಪರಬ್ರಹ್ಮಪ್ರಾಪ್ತಿಯೇ ಆಗಿದ್ದು ನಿತ್ಯವೂ ಅವಿನಾಶಿಯೂ ಸ್ವರೂಪವೂ ಆಗಿರುವದೆಂದೂ ಇಲ್ಲಿ ವಿವರಿಸಿರುತ್ತದೆ. ಆದರೆ ಇಂಥ ತತ್ತ್ವಜ್ಞಾನಕ್ಕೆ ಸಾಧನವಾಗಿ ಕರ್ಮೋಪಾಸನೆಗಳೂ

ಚಿತ್ತಶುದ್ಧಿದ್ವಾರಾ ಸಹಾಯಕಗಳೆಂದು ಸಮನ್ವಯಗೊಳಿಸಿದೆ. ನ ಹಿ ನಿಂದಾ ನ್ಯಾಯದಂತೆ ಇಲ್ಲಿ ಕರ್ಮೋಪಾಸನೆಗಳನ್ನು ನಿಂದಿಸಿರುವಂತೆ ಕಂಡುಬಂದರೂ ಅದು ಆತ್ಮಜ್ಞಾನವನ್ನು ಹೊಗಳುವ ನೆಪದಲ್ಲಿ ಪ್ರಸ್ತುತವಾಗಿದೆಯೆಂದು ತಿಳಿಸಿ ಸಾಧನತ್ರಯಗಳನ್ನೂ ನಿರೂಪಿಸಿ ತಾತ್ಪರ್ಯವನ್ನು ಸ್ಫುಟಗೊಳಿಸಲಾಗಿದೆ.

ಈ ಗ್ರಂಥದಲ್ಲಿ ಈಶಾವಾಸ್ಯೋಪನಿಷತ್ತಿನ ಮಾಧ್ಯಂದಿನಪಾಠಾನುಸಾರವಾಗಿಯೇ ಶ್ರೀಶ್ರೀಗಳವರು ವಿವರಣೆಯನ್ನು ಬರೆದಿರುತ್ತಾರೆ. ಈ ವಿಚಾರವನ್ನು ಗ್ರಂಥಶರೀರದಲ್ಲಿ ಅವರು ಕಡೆಯಲ್ಲಿ ಪ್ರಸ್ತಾಪಿಸಿದ್ದಾರೆ. ಶ್ರೀಶಂಕರಭಗವತ್ಪಾದರು ಈ ಉಪನಿಷತ್ತಿಗೆ ತಮ್ಮ ಭಾಷ್ಯವನ್ನು ಕಾಣ್ವಪಾಠಾನುಗುಣವಾಗಿ ರಚಿಸಿದ್ದಾರೆ. ಬೃಹದಾರಣ್ಯಕೋಪನಿಷದ್ಭಾಷ್ಯವೂ ಕಾಣ್ವಪಾಠಾನುಗುಣವಾಗಿಯೇ ಇದೆ. ಆದರೆ ಆಚಾರ್ಯರು ತಮ್ಮ ಭಾಷ್ಯಗಳಲ್ಲಿ ಪ್ರಮಾಣವಚನಗಳನ್ನು ಉದಾಹರಿಸುವಾಗ ಮಾತ್ರ ಮಾಧ್ಯಂದಿನಪಾಠವನ್ನೇ ಬಳಸಿರುವದು ಬಹಳಕಡೆ ಕಂಡುಬಂದಿದೆ. ಇದು ಆಚಾರ್ಯರ ಶೈಲಿಯೆಂದು ಭಾವಿಸಬೇಕಾಗಿದೆ. ಒಟ್ಟಿನಲ್ಲಿ ಮೂರ್ತಿಯಲ್ಲಿ ಚಿಕ್ಕದಾದರೂ ಜಟಿಲವೂ ವೇದಾಂತದರ್ಶನದ ಸಾರವನ್ನೆಲ್ಲ ತನ್ನಲ್ಲಿ ಅಡಗಿಸಿಕೊಂಡಿರುವದೂ ಆಗಿರುವ ಈಶಾವಾಸ್ಯೋಪನಿಷತ್ತು ಓದುಗರಿಗೆ ಬಹಳ ಕಷ್ಟದಿಂದ ತಾತ್ಪರ್ಯಗ್ರಹಣಮಾಡಬೇಕಾದಂಥ ಪರಿಸ್ಥಿತಿಯಲ್ಲಿರುವದನ್ನು ಕಂಡು ಜಿಜ್ಞಾಸುಗಳ ಅನುಕೂಲಕ್ಕಾಗಿ ಪೂಜ್ಯ ಶ್ರೀಗಳು ಬರೆದಿರುವ ವಿವರಣೆಯನ್ನೇ ಯಥಾವತ್ತಾಗಿ ಈ ಗ್ರಂಥರೂಪದಿಂದ ಮಂಜರಿಯಾಗಿ ಹೊರತಂದಿದೆ. ವಾಚಕರು ಉಳಿದ ಎಲ್ಲಾ ಗ್ರಂಥಗಳಂತೆಯೇ ಈ ಗ್ರಂಥವನ್ನೂ ಆದರದಿಂದ ಬರಮಾಡಿಕೊಂಡು ಪ್ರೋತ್ಸಾಹಿಸುವರೆಂದು ನಂಬಲಾಗಿದೆ.

ಹೊಳೆನರಸೀಪುರ — ಇತಿ

ತಾ|| 7.12.2001 — ಪ್ರಕಾಶಕರು

॥ ಓಮ್ ॥

# ಈಶಾವಾಸ್ಯೋಪನ್ಯಾಸಮಂಜರಿ

(ಮೂಲ)

ಓಂ ॥ ಈಶಾವಾಸ್ಯಮಿದಗ್‍ಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ।
ತೇನ ತ್ಯಕ್ತೇನ ಭುಂಜೀಥಾಃ ಮಾ ಗೃಧಃ ಕಸ್ಯಸ್ವಿದ್ಧನಮ್ ॥ ೧ ॥

"ಇದೆಲ್ಲವೂ ಎಂದರೆ ಜಗತ್ತಿನಲ್ಲಿ ಸ್ಥಾವರಜಂಗಮಾತ್ಮಕವಾದದ್ದು ಏನೇನಿದೆಯೋ ಅದೆಲ್ಲವೂ ಈಶ್ವರನಿಂದ ಮುಚ್ಚಲ್ಪಡತಕ್ಕದ್ದು. ಅದರಿಂದ ಎಂದರೆ ತ್ಯಾಗದಿಂದ ಆತ್ಮರಕ್ಷಣೆಯನ್ನು ಮಾಡಿಕೊ ; ಯಾರೊಬ್ಬರ ಹಣವನ್ನೂ ಬಯಸಬೇಡ."

ಈಶಾವಾಸ್ಯೋಪನಿಷತ್ತಿನ ಮೊದಲನೆಯ ಮಂತ್ರವಿದು. ಉಪನಿಷತ್ತುಗಳಲ್ಲಿ ಹೇಳಿರುವ ವೈರಾಗ್ಯಕ್ಕೆ ಆಧಾರವೇನೆಂಬುದನ್ನು ಇಲ್ಲಿ ಸ್ಪಷ್ಟವಾಗಿ ಕಾಣಬಹುದು. ವೈರಾಗ್ಯವೆಂಬುದು ನಮಗೆ ಹಿತಕರವಲ್ಲವೆಂದೇ ಈಗಿನ ಅನೇಕ ಜನರ ಅಭಿಪ್ರಾಯವಿದೆ. ಆದ್ದರಿಂದಲೇ ವೈರಾಗ್ಯದ ಮಾತನ್ನು ಕೇಳಿದರೂ ಬಹುಜನರು ಬೆಚ್ಚಿಬೀಳುವರು. ಇದಕ್ಕೆ ಕಾರಣವೇನೆಂದರೆ ನಾವು ವೈರಾಗ್ಯವೆಂಬ ಮಾತಿನ ಅರ್ಥವನ್ನು ಚೆನ್ನಾಗಿ ಮನವರಿಕೆಮಾಡಿಕೊಂಡಿಲ್ಲ. ಮನೆ, ಮಠ, ಹೆಂಡಿರು, ಮಕ್ಕಳು – ಇವರನ್ನು ಬಿಟ್ಟು ಬೈರಾಗಿಯಾಗಿ ಬೂದಿಯನ್ನು ಬಳಿದುಕೊಂಡು ಕಾವಿಯನ್ನುಟ್ಟು ಕಾಡಿಗೆ ಹೋಗುವದು ಅಥವಾ ಹೊರದೇಶಕ್ಕೆ ಹೋಗಿಬಿಡುವದು ವೈರಾಗ್ಯವೆಂದು ನಮ್ಮಲ್ಲಿ ಅನೇಕರು ಭಾವಿಸಿರುತ್ತಾರೆ. ಧೀರರಾಗಿ ವ್ಯವಹಾರದಲ್ಲಿ ಕೆಲಸಮಾಡುವದಕ್ಕಾಗದವರು ಕೆಲವರು ಈ ವೈರಾಗ್ಯವನ್ನು ಅವಲಂಬಿಸಬಹುದು. ಆದರೆ ಉಪನಿಷತ್ತುಗಳಲ್ಲಿ ಹೇಳಿರುವ ವೈರಾಗ್ಯವು ಇದಲ್ಲ.

ಈ ಮಂತ್ರದ ನಾಲ್ಕನೆಯ ಚರಣದಲ್ಲಿ ವೈರಾಗ್ಯದ ಸ್ವಭಾವವನ್ನು ಸ್ವಲ್ಪ ಮಟ್ಟಿಗೆ ತಿಳಿಸಿರುತ್ತದೆ. ವೈರಾಗ್ಯವೆಂದರೆ ವಿರಾಗದ ಭಾವವು. ಯಾವನಿಗೆ ಈ ವಸ್ತುವು ನನಗೆ ಆಗಬೇಕೆಂಬ ಆಸೆಯಿರುವದೋ ಅವನು ರಾಗಿಯು. ಇದು ಇವನ ಧನವು ; ಇದು ನನ್ನ ಧನವು ; 'ಇಗೊ, ಇಂದು ನನಗೆ ಈ ಧನವು ಪ್ರಾಪ್ತವಾಯಿತು, ನಾಳೆ ಇದು ದೊರಕುವದು' ಎಂದು ಮನಸ್ಸಿನಲ್ಲಿ ಅಳೆದುಹೊಯ್ದು ಮಾಡುತ್ತಿರುವದೇ ರಾಗದ ಗುರುತು. ಇದರಿಂದ ಮನುಷ್ಯನಿಗೆ ಸುಖವಾಗುವದಕ್ಕೆ ಬದಲಾಗಿ ತಳಮಳವು ಹೆಚ್ಚುವದು. ಈ ಧನಬುದ್ಧಿಯಿಂದ ಒಬ್ಬರಿಗೊಬ್ಬರಿಗೆ ದ್ವೇಷವುಂಟಾಗುತ್ತದೆ. ಲೋಕದಲ್ಲಿ ಅಶಾಂತಿಯುಂಟಾಗುತ್ತದೆ. ಆದ್ದರಿಂದ ಧನದಾಸೆಯನ್ನು

ಮಾಡಬೇಡಿರಿ. ಯಾರೊಬ್ಬರ ಧನವಾಗಲಿ – ನಮಗೆ ಆಗಬೇಕೆಂದು ಹವಣಿಸದಿರಿ – ಎಂದು ಇಲ್ಲಿ ಉಪದೇಶಿಸಿರುತ್ತದೆ.

ಈ ಶ್ಲೋಕಪಾದಕ್ಕೆ ಮತ್ತೊಂದು ಅರ್ಥವನ್ನು ಮಾಡಬಹುದು. 'ಮಾ ಗೃಧಃ' ಆಸೆಮಾಡಿ ಬರಿದೆ ಮನಸ್ಸಿಗೆ ವ್ಯಥೆಯನ್ನುಂಟುಮಾಡಿಕೊಳ್ಳದಿರಿ. ಏಕೆಂದರೆ 'ಕಸ್ಯ ಸ್ವಿದ್ಧನಮ್' ಯಾರಿಗೆತಾನೆ ಧನವಿರುವದು ? ಹೊರಗೆ ಧನ ಸಂಪತ್ತಿ ಇದೆ – ಎಂದೂ ಅದು ತನಗೆ ಆಗಬೇಕೆಂದೂ ಒಬ್ಬೊಬ್ಬನೂ ಹಂಬಲಿಸುತ್ತಿರುವದೇ ಈ ಲೋಕದ ಸಕಲಾನರ್ಥಗಳಿಗೂ ಕಾರಣವಾಗಿರುವದು. ಬರಿಯ ವ್ಯಕ್ತಿಗಳೇ ಅಲ್ಲ; ಜನಾಂಗಗಳು ಕೂಡ ಈಗಿನ ಕಾಲದಲ್ಲಿ ಧನಾಕಾಂಕ್ಷೆಯಿಂದಲೇ ಜೀವನವನ್ನೂ ಹಾಳುಮಾಡಿಕೊಳ್ಳುತ್ತಿರುವವು. ಇದು ಗೋಧನ, ಇದು ಭೂಧನ, ಇದು ಹಿರಣ್ಯಧನ– ಎಂದು ಬಗೆಬಗೆಯಾಗಿ ವಿಕಲ್ಪಿಸುತ್ತಾ ಧನಪ್ರಾಪ್ತಿಗಾಗಿ ಒಬ್ಬರಿಗೊಬ್ಬರು ತೊಂದರೆಯನ್ನುಂಟುಮಾಡುತ್ತಲೂ ಒಬ್ಬರ ಕತ್ತನ್ನೊಬ್ಬರು ಹಿಸುಕುತ್ತಲೂ ಒಂದು ಜನಾಂಗವನ್ನು ಮತ್ತೊಂದು ಜನಾಂಗದವರು ಮದ್ದುಗುಂಡುಗಳಿಗೆ ತುತ್ತಾಗಿಸುತ್ತಲೂ ಇರುವರು. ಆದರೆ ನಿಜವಾಗಿ ನೋಡಿದರೆ ಧನವೆಂಬುದೇ ಸುಳ್ಳು. ನಿಜವಾಗಿ ಯಾರೊಬ್ಬರೂ ಇದಕ್ಕೆ ಸ್ವಾಮಿಗಳಿಲ್ಲ. ಈ ಗುಟ್ಟನ್ನು ಅರಿತವರು ವೈರಾಗ್ಯದಿಂದ ತಮ್ಮನ್ನು ತಾವು ಕಾಪಾಡಿಕೊಳ್ಳಬಹುದು. ರಾಗಿಗಳಾಗಿ ದುಃಖದಲ್ಲಿ ತಾವು ಮುಳುಗಿ ಮತ್ತೊಬ್ಬರನ್ನೂ ಮುಳುಗಿಸುವದಕ್ಕಿಂತ ತ್ಯಾಗಿಗಳಾಗಿ ಎಲ್ಲರೂ ಆನಂದದಲ್ಲಿ ಓಲಾಡಬಹುದು. ಇದೇ 'ತ್ಯಾಗದಿಂದ ಕಾಪಾಡಿಕೊ' ಎಂಬ ಮೂರನೆಯ ಪಾದದ ಭಾವಾರ್ಥವು.

ಲೋಕದಲ್ಲಿ ಧನಧನಿಭಾವವೇ ಎಲ್ಲೆಲ್ಲಿಯೂ ಕಾಣುತ್ತಿದೆಯಲ್ಲ ? ಹೀಗಿರುವಲ್ಲಿ ಧನಧನಿಭಾವವೇ ಇಲ್ಲವೆಂದು ಹೇಳುವದನ್ನು ಹೇಗೆ ನಂಬುವದು ? ಧನಬುದ್ಧಿಯನ್ನು ಬಿಟ್ಟು ವ್ಯವಹಾರವನ್ನು ಮಾಡುವದು ಸಾಧ್ಯವೆ ? ಎಂಬ ಶಂಕೆಗೆ ಸಮಾಧಾನವು ಈ ಮಂತ್ರದ ಪೂರ್ವಾರ್ಧದಲ್ಲಿರುತ್ತದೆ. ಅದನ್ನೀಗ ವಿಚಾರ ಮಾಡೋಣ. ಧನಧನಿಭಾವವು – ಎಂದರೆ 'ಇದು ನನ್ನ ಧನವು, ನಾನು ಇದಕ್ಕೆ ಒಡೆಯನು' ಎಂಬ ಭಾವವು ನಮ್ಮ ಈಗಿನ ಜೀವನದಲ್ಲೆಲ್ಲ ಹಾಸುಹೊಕ್ಕಾಗಿ ಹೆಣೆದುಕೊಂಡಿರುತ್ತದೆ. ಇದೇ ನಮ್ಮ ನಾಗರಿಕತೆಯ ಕ್ಲೇಶಗಳಿಗೆಲ್ಲ ಕಾರಣವಾಗಿರುತ್ತದೆ– ಎಂದು ಉತ್ತರಾರ್ಧದಲ್ಲಿ ಹೇಳಿರುವದು ಸರಿಯಾಗಿದೆಯೆಂತ ಮೊದಮೊದಲು ನಮಗೆ ಕಾಣುವದಿಲ್ಲ. ಇದು ಇಂಥವನ ಸ್ವತ್ತು ಎಂಬ ಭಾವನೆ ಇಲ್ಲದಿದ್ದರೆ ಕಳ್ಳತನವು ಪಾಪವೆಂದು ಹೇಗೆ ಏರ್ಪಟ್ಟೀತು ? ಈ ಧನಸಂಪತ್ತು

ನನಗಿದೆ ; ಆಪತ್ಕಾಲಕ್ಕೆ ಇದು ನನಗೆ ಸಹಾಯಕವಾಗುತ್ತದೆ – ಎಂಬ ಭರವಸೆಯು ಮನಸ್ಸಿಗೆ ಇಲ್ಲದೆ ಇದ್ದರೆ ಮನುಷ್ಯನಿಗೆ ಸಂಸಾರದಲ್ಲಿ ನೆಮ್ಮದಿ ಹೇಗೆ ಇದ್ದೀತು ? ಲೋಕದಲ್ಲಿ ಪ್ರಸಿದ್ಧವಾಗಿರುವ ಧನಧನಿಭಾವವು ಇಲ್ಲವೆಂದು ಹೇಳುವವರ ಮಾತು ಹೇಗೆ ಒಪ್ಪತಕ್ಕದ್ದಾಗುವದು ? ಎಂಬ ಶಂಕೆಯು ಸಹಜವಾಗಿ ನಮ್ಮನ್ನು ಬಾಧಿಸುತ್ತದೆ.

'ಈಶಾವಾಸ್ಯಮಿದಂ' ಎಂಬ ವಾಕ್ಯವು ಈ ಶಂಕೆಗೆ ಪರಿಹಾರವನ್ನು ತಿಳಿಸುತ್ತದೆ. ನಾವು ನೋಡುತ್ತಿರುವ ಧನಧನಿಭಾವದ ಜಗತ್ತು ಕೇವಲ ನಮ್ಮ ಕಲ್ಪನೆಯದಾಗಿರುತ್ತದೆ. ವ್ಯವಹಾರದಲ್ಲಿ ಈ ಕಲ್ಪನೆಯು ಸ್ವಲ್ಪಮಟ್ಟಿಗೆ ಪ್ರಯೋಜನಕಾರಿಯಾಗಿರುತ್ತದೆ – ಎಂಬ ಕಾರಣದಿಂದ ಅರ್ಥಶಾಸ್ತ್ರದಲ್ಲಿಯೂ ಈ ಕಲ್ಪನೆಯನ್ನೇ ಇಟ್ಟುಕೊಂಡಿರುತ್ತದೆ. ಆದರೆ ಇದು ಶಾಶ್ವತವಾಗಿ ನಿಲ್ಲುವ ಕಲ್ಪನೆಯೆ ? ಹೆಣ್ಣು, ಹೊನ್ನು, ಮಣ್ಣು – ಈ ಮೂರಕ್ಕೂ ನಾನು ಒಡೆಯನು, ತಾನು ಒಡೆಯನು – ಎಂದು ಜನರು ವ್ಯವಹರಿಸುತ್ತಿರುವದು ನಿಜ. ಆದರೆ ಪರಮಾರ್ಥವೇನು ? ನಿಜವಾಗಿಯೂ ಅವು ನಮ್ಮಗಳ ಸ್ವತ್ತಾಗಿರುವವೆ ? ಅವು ನಾವು ಹೇಳಿದಂತೆ ನಮ್ಮ ವಶದಲ್ಲಿಯೇ ಇರುವವೆ ? ಇದು ನನ್ನದು, ಇದು ನನ್ನದು – ಎನ್ನುತ್ತಿರುವಾಗಲೇ ಪದಾರ್ಥಗಳು ನಮ್ಮ ಕೈಬಿಟ್ಟು ಮತ್ತೊಬ್ಬರ ಪಾಲಾಗುವವು. ಅವರಿಂದ ಮತ್ತೊಬ್ಬರಿಗೆ, ಅವರಿಂದ ಇನ್ನೊಬ್ಬರಿಗೆ – ಹೀಗೆ ಬಿಡದೆ ಚಲಿಸುತ್ತಿರುವದೇ ಆ ವಸ್ತುಗಳ ಸ್ವಭಾವವು. ಇಷ್ಟೇ ಅಲ್ಲ, ಸ್ವಾಮಿಗಳು, ಧಣಿಗಳು – ಎಂದುಕೊಳ್ಳುತ್ತಿರುವ ನಾವಾದರೂ ಅವುಗಳನ್ನು ಶಾಶ್ವತವಾಗಿ ಅನುಭವಿಸುತ್ತಿರುವೆವೆ ? ಇಲ್ಲ. ಹಿಂದೆ ಎಷ್ಟು ಜನ ದೊರೆಗಳು ಈ ಭೂಮಿಯನ್ನು ಅಥವಾ ಭೂಭಾಗವನ್ನು ತಮ್ಮದೆಂದು ಕರೆದುಕೊಂಡು ಮೆರೆದರು? ಈಗ ಅವರೆಲ್ಲಿದ್ದಾರೆ ? ಇದೊಂದು ನಾಟಕವು. ನಿಜವಾಗಿ ನೋಡಿದರೆ ಯಾವದೂ ಯಾರದೂ ಸ್ವತ್ತಲ್ಲ. ಇದೆಲ್ಲ ಬರಿಯ ತೋರಿಕೆಯು.

ಈ ತೋರಿಕೆಯು ಪರಮಾರ್ಥವನ್ನು ಮುಚ್ಚಿಬಿಟ್ಟಿರುತ್ತದೆ. ಪರಮಾರ್ಥವೇನು ? ಇದೆಲ್ಲ ಈಶ್ವರನೇ. ಈಶ್ವರನೆಂಬ ಪರಮಾರ್ಥವನ್ನು ನಮ್ಮ ಕಲ್ಪನೆಯ ಧನಧನಿಭಾವವು ಮುಚ್ಚಿಹಾಕಿಬಿಟ್ಟಿರುತ್ತದೆ. ಒಂದು ಗಂಧದ ಕೊರಡು ಬಹುಕಾಲ ನೀರಿನಲ್ಲಿ ಬಿದ್ದಿದ್ದರೆ ಅದರ ಮೇಲುಭಾಗವು ಕೊಳೆಯಾಗುತ್ತಾಬಂದು ಅದರಿಂದ ದುರ್ಗಂಧವೂ ಹೊರಡುವದಕ್ಕೆ ಪ್ರಾರಂಭಿಸಿಬಿಡುತ್ತದೆ. ಇದರಲ್ಲಿ ಸ್ವಭಾವದಿಂದಲೇ ಇರುವ ಸುವಾಸನೆಯನ್ನು ಮೆಟ್ಟಿ ಆ ಕೆಟ್ಟವಾಸನೆಯು ಎಲ್ಲರ ಮೂಗಿಗೂ

ಬಡಿಯುತ್ತಾ ಅಸಹ್ಯವಾಗಿ ಪರಿಣಮಿಸುತ್ತದೆಯಲ್ಲವೆ ? ಹಾಗೆಯೇ ಈಗ ನಮಗೆ ಕಾಣುತ್ತಿರುವ ನಾನು, ನನ್ನದು – ಎಂಬ ವ್ಯವಹಾರದ ದುರ್ಗಂಧವು ಈಶ್ವರನೆಂಬ ಪರಮಾರ್ಥದ ಪರಿಮಳವನ್ನು ಅಲ್ಲಗಳೆದು ತಾನೇತಾನಾಗಿ ಎಲ್ಲೆಲ್ಲಿಯೂ ಮುಸುಕಿಕೊಂಡಿರುತ್ತದೆ. ಯಾವಾಗಲೂ ಮೀನಿನ ವಾಸನೆಯನ್ನು ಕುಡಿದು ಅಭ್ಯಾಸವಾಗಿಬಿಟ್ಟಿರುವ ಬೆಸ್ತರಿಗೆ ಹೂವಿನ ಪರಿಮಳಕ್ಕಿಂತ ಮೀನಿನ ವಾಸನೆಯೇ ಮೆಚ್ಚಾಗಿರುವಂತೆ ನಮಗೆ ಈ ಧನಧನಿಭಾವವೇ ಅಚ್ಚುಮೆಚ್ಚಾಗಿ ತೋರುತ್ತಿದೆ. ಅದರಲ್ಲಿ ನಾವು ಆಗಾಗ್ಗೆ ಎಷ್ಟೋ ಸಂಕಟಗಳನ್ನನುಭವಿಸಿದರೂ ಅದಕ್ಕಿಂತ ಹೆಚ್ಚಿನದೊಂದು ಪರಮಾರ್ಥವು ಇದೆಯೆಂಬ ಅರಿವೇ ಇಲ್ಲದಂತಾಗಿರುವದರಿಂದ ಈ ಧನಧನಿವ್ಯವಹಾರವು ನಮ್ಮ ಪ್ರಾಣಕ್ಕಿಂತಲೂ ಹೆಚ್ಚಿನದೆಂದು ಭಾವಿಸುತ್ತಾ ಬಂದಿರುತ್ತೇವೆ. ಹೀಗೆ ಮುಸುಕಿರುವ ಈ ಧನಧನಿವ್ಯವಹಾರದ ದುರ್ಗಂಧವನ್ನು ಕಳೆದು ಪರಮಾರ್ಥವಾದ ಈಶ್ವರನ ಗಂಧವನ್ನು ಅನುಭವಿಸಿರಿ – ಎಂದು ತಿಳಿಸುವದೇ 'ಈಶಾವಾಸ್ಯಮ್' ಎಂಬಿದರ ಉದ್ದೇಶವಾಗಿದೆ.

ಕೊಳೆತವಾಸನೆಯಿಂದ ನಾರುತ್ತಿರುವ ಗಂಧದ ಕೊರಡಿನ ಮೇಲುಭಾಗವನ್ನು ಸ್ವಲ್ಪ ತೇದರೆ ಅದರ ಒಳಗಿನ ಸಹಜ ಸುವಾಸನೆಯು ಮೇಲಕ್ಕೇರುವದು. ಇದರಂತೆಯೇ ನಮಗೆ ಎಲ್ಲೆಲ್ಲಿಯೂ ಕಾಣುತ್ತಿರುವ ಈ ಧನಧನಿಭಾವದ ಕೆಟ್ಟವಾಸನೆಯನ್ನು ಕಡಿಮೆಮಾಡಬೇಕಾದರೆ ವಿಚಾರದಿಂದ ಈ ಪ್ರಪಂಚವನ್ನು ತೇಯಬೇಕು. ಆಮೇಲೆ ಅದರೊಳಗೆ ಸಹಜವಾಗಿದ್ದುಕೊಂಡಿರುವ ಈಶ್ವರನೆಂಬ ಪರಮಾರ್ಥವಾದ ಪರಿಮಳವು ಎದ್ದುಕೊಳ್ಳುವದು. 'ಇದೆಲ್ಲವೂ ಈಶ್ವರನೇ' ಎಂಬ ತತ್ತ್ವದ ಅರಿವು ನಮಗಾಗುವದು. ಆನಂದವು ತಲೆದೋರುವದು.

ಶಾಂತವಾಗಿ ಅಮೃತವಾಗಿ ಆನಂದಸ್ವರೂಪನಾಗಿರುವ ಪರಮಾತ್ಮನೆಂಬ ಪರಮಾರ್ಥಸಾಗರದಲ್ಲಿ ನಾವು 'ಇದು ಚೇತನವು ; ಇದು ಅಚೇತನವು ; ಇವು ಪಕ್ಷಿಗಳು ; ಇವು ಮೃಗಗಳು ; ಇವು ಬೆಟ್ಟಗಳು ; ಇವು ಹಳ್ಳಗಳು'– ಎಂದು ಬಗೆ ಬಗೆಯಾಗಿ ತೆರೆಗಳನ್ನೂ ನೊರೆಯನ್ನೂ ಗುಳ್ಳೆಗಳನ್ನೂ ಕಲ್ಪಿಸುತ್ತಿರುವೆವು. ಇದು ನನ್ನದು, ಇದು ಅವನದು – ಎಂಬ ಧನಧನಿಭಾವವೂ ಇಂಥ ಕಲ್ಪನೆಗಳಲ್ಲೊಂದಾಗಿರುತ್ತದೆ. ಈ ಕಲ್ಪನೆಯಿಂದ ನಮಗೆ ಮನಸ್ಸಿನಲ್ಲಿ ನೆಮ್ಮದಿಯುಂಟಾಗುವದಕ್ಕೆ ಬದಲು ಪರದಾಟವುಂಟಾಗುತ್ತಲಿದೆ. ನಿಜವಾದ ಶಾಂತಿಯು ನಮಗೆ ಬೇಕಾಗಿದ್ದರೆ 'ಇದೆಲ್ಲವೂ ಪರಮಾತ್ಮನೇ ; ಸೂರ್ಯಚಂದ್ರಾದಿಜ್ಯೋತಿಗಳೂ ಹದಿನಾಲ್ಕು ಲೋಕಗಳೂ ವಿಷ್ಣುವೇ. ಅರಣ್ಯಗಳು, ಪರ್ವತಗಳು, ದಿಕ್ಕುಗಳೆಲ್ಲವೂ ವಿಷ್ಣುವೇ ;

ನದಿಗಳೂ ಸಮುದ್ರಗಳೂ ವಿಷ್ಣುವೇ' ಯಾವಯಾವದಿದೆಯೋ ಯಾವಯಾವದಿಲ್ಲವೋ ಎಲ್ಲವೂ ಆ ವಿಷ್ಣುಪರಮಾತ್ಮನೇ – ಎಂಬ ನಿಶ್ಚಯಜ್ಞಾನವನ್ನುಂಟು ಮಾಡಿಕೊಳ್ಳಬೇಕು.

(ಮೂಲ)

**ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ ಶತಗ್ಂ ಸಮಾಃ।**
**ಏವಂ ತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯತೇ ನರೇ ॥**

"ಕರ್ಮಗಳನ್ನು ಮಾಡುತ್ತಲೇ ಇಲ್ಲಿ ನೂರು ವರ್ಷಗಳು ಬಾಳುವದಕ್ಕೆ ಬಯಸಬೇಕು. ಹೀಗಿದ್ದರೆ ಮಾನವನಾದ ನಿನ್ನ ಬಾಳು ಸರಿಯಾದ ಬಾಳಾಗುವದು. ಇದಕ್ಕಿಂತ ಬೇರೆಯ ರೀತಿಯಲ್ಲಿ ಕರ್ಮದ ಲೋಪವಿಲ್ಲದಂತೆ ಬಾಳುವದಕ್ಕೆ ಆಗುವದೇ ಇಲ್ಲ."

ಇದು ಉಪನಿಷತ್ತಿನ ಎರಡನೆಯ ಮಂತ್ರವು. ಎಲ್ಲವನ್ನೂ ತ್ಯಜಿಸಿ ಸರ್ವತ್ರ ಪರಮೇಶ್ವರನನ್ನೇ ಕಾಣುವ ಶಕ್ತಿಯಿಲ್ಲದವರು ಅನುಸರಿಸಬೇಕಾದ ಪ್ರವೃತ್ತಿಧರ್ಮವನ್ನು ಇಲ್ಲಿ ತಿಳಿಸಿರುತ್ತದೆ. ಇದೆಲ್ಲವೂ ಪರಬ್ರಹ್ಮವೇ ; ಆ ಪರಮಾತ್ಮನಿಗಿಂತ ಬೇರೆಯಾಗಿ ಚರಾಚರಜಗತ್ತೆಂಬುದು ಇರುವದೇ ಇಲ್ಲ – ಎಂಬ ಉತ್ತಮವಾದ ಅರಿವು ಯಾರಿಗೆ ಬಂದಿರುವದೋ ಅಂಥವರು ಜ್ಞಾನ ವೈರಾಗ್ಯರೂಪವಾದ ನಿವೃತ್ತಿಧರ್ಮದಲ್ಲಿಯೇ ಕಾಲವನ್ನು ಕಳೆಯುವರು. ಆದರೆ ಇನ್ನೂ ಈ ಹಂತವನ್ನೇರದೆ ಕೆಳಗಿನ ಹಂತದಲ್ಲಿರುವವರು ಹೇಗೆ ವರ್ತಿಸಬೇಕು ? ಎಂದರೆ ಅವರು ಕರ್ಮಗಳನ್ನು ಮಾಡುತ್ತಲೇ ಇರಬೇಕು. ಅವರು ತಮ್ಮ ಇಡಿಯ ಆಯುಸ್ಸನ್ನು ಕರ್ಮಗಳಿಂದಲೇ ಕಳೆಯಬೇಕು– ಎಂಬುದು ಶ್ರುತಿಯ ಉಪದೇಶವು.

ಕರ್ಮವೆಂದರೆ ಕೆಲಸವೆಂದು ಸಾಮಾನ್ಯವಾಗಿ ಅರ್ಥವಾಗುತ್ತದೆ. ಲೋಕದಲ್ಲಿ ಈ ಅರ್ಥದಲ್ಲಿ ಕರ್ಮವನ್ನು ಮಾಡದೆ ಇರುವವರೇ ಇಲ್ಲ. ಯಾರೇ ಆಗಲಿ; ಮತ್ತೇನೂ ಕೆಲಸವನ್ನು ಮಾಡದೆ ಇದ್ದರೂ ದೇಹಯಾತ್ರೆಗೆ ತಕ್ಕಷ್ಟು ಆಹಾರ, ವಿಹಾರ, ನಿದ್ರಾದಿಗಳನ್ನಾದರೂ ಮಾಡುವರು. ಆದ್ದರಿಂದ ಕೆಲಸವೆಂಬ ಅರ್ಥವನ್ನಿಟ್ಟುಕೊಂಡರೆ 'ಕರ್ಮವನ್ನು ಮಾಡು' ಎಂದು ಯಾರಿಗೂ ಉಪದೇಶಮಾಡಬೇಕಾದದ್ದೇ ಇರುವದಿಲ್ಲ. ಒಲ್ಲೆನೆಂದರೂ ಪರವಶವಾಗಿ ಕೆಲಸಮಾಡುತ್ತಿರುವದೇ ಪ್ರಾಣಿಮಾತ್ರಕ್ಕೆ ಧರ್ಮವಾಗಿರುತ್ತದೆ. ಆದ್ದರಿಂದ ಈ

ಮಂತ್ರದಲ್ಲಿ ಕರ್ಮವೆಂದರೆ ಕೆಲಸವೆಂದು ಅರ್ಥವಲ್ಲ. ಶಾಸ್ತ್ರದಲ್ಲಿ ಹೇಳಿರುವ ಕರ್ಮವೆಂದೇ ಅರ್ಥ. ಶಾಸ್ತ್ರದಲ್ಲಿ ಇಂಥ ಕರ್ಮವನ್ನು ಮಾಡಬಾರದು ಎಂದು ನಿಷೇಧಮಾಡಿರುತ್ತದೆ. ಇಂಥ ಕರ್ಮವನ್ನು ಮಾಡಬೇಕು– ಎಂದು ವಿಧಿಸಿಯೂ ಇರುತ್ತದೆ. ವಿಧಿಸಿರುವ ಕರ್ಮಗಳಲ್ಲಿ ಇಂಥ ಫಲವಾಗಬೇಕು – ಎಂಬ ಆಸೆ ಯಿದ್ದರೆ ಇಂಥ ಕರ್ಮವನ್ನು ಮಾಡಬೇಕೆಂದು ವಿಹಿತವಾಗಿರುವ ಕಾಮ್ಯಕರ್ಮ ಗಳು, ಇಂಥಿಂಥ ತಪ್ಪನ್ನು ಮಾಡಿದ್ದರ ಪರಿಹಾರಕ್ಕಾಗಿ ಮಾಡಬೇಕೆಂದು ವಿಹಿತ ವಾಗಿರುವ ಪ್ರಾಯಶ್ಚಿತ್ತಗಳು, ಗ್ರಹಣವೇ ಮುಂತಾದ ನಿಮಿತ್ತಗಳು ಒದಗಿದಾಗ ಮಾಡಬೇಕೆಂದು ವಿಧಿಸಿರುವ ನೈಮಿತ್ತಿಕಕರ್ಮಗಳು – ಇಷ್ಟೂ ಸೇರಿರುತ್ತವೆ. ಈ ಮಂತ್ರದಲ್ಲಿ ಕಾಮ್ಯನಿಷಿದ್ಧಕರ್ಮಗಳನ್ನು ಬಿಟ್ಟು ನಿತ್ಯಕರ್ಮಗಳನ್ನು ಮಾಡುತ್ತಲೇ ಇರಬೇಕು ತಾನು ಬದುಕಿರುವವರೆಗೂ ಈ ಕರ್ಮಗಳನ್ನು ಯಥಾಶಕ್ತಿಯಾಗಿ ಮಾಡುತ್ತಲೇ ಇರಬೇಕು – ಎಂದು ಮುಖ್ಯವಾಗಿ ಉಪದೇಶಮಾಡಿರುತ್ತದೆ.

ಕರ್ಮಗಳನ್ನು ಮಾಡುತ್ತಲೇ ಜೀವಿಸಬೇಕೆಂಬುದೇಕೆ ? ಮನುಷ್ಯನು ತನಗೆ ಯಾವದು ಪ್ರಿಯವೆಂದು ತೋರುವದೋ ಅದರಂತೆಯೇ ಮಾಡಬಾರದೇಕೆ ? ಎಂದು ಕೆಲವರಿಗೆ ತೋರಬಹುದು. ಇದಕ್ಕೆ ಉತ್ತರವೇನೆಂದರೆ : ಯಾವ ಯಾವದು ಪ್ರಿಯವೆಂದು ತೋರುವದೋ ಅದೆಲ್ಲವೂ ಹಿತವಾಗಿರುವದಿಲ್ಲ. ಹಿತವಲ್ಲದ ಕರ್ಮಗಳನ್ನೂ ನಾವು ಮಾಡುವದಾದರೆ ಅವುಗಳ ಫಲವನ್ನು ಕಷ್ಟದಿಂದ ಅನುಭವಿಸಬೇಕಾಗುವದು. ನಗುತ್ತಾ ಮಾಡುವ ಕರ್ಮದ ಫಲವನ್ನು ಅಳುತ್ತಾ ಅನುಭವಿಸುವದು ವಿವೇಕಿಗಳಿಗೆ ತಕ್ಕದ್ದಲ್ಲ. ಮನಸ್ಸಿಗೆ ತಿಳಿದಂತೆ ಮಾಡಿದರೆ ಇಹದಲ್ಲಿಯಾಗಲಿ ಪರದಲ್ಲಿಯಾಗಲಿ ಸುಖವನ್ನು ಅನುಭವಿಸಲಾರರು. ಮಕ್ಕಳಿಗೆ ಹಿತವನ್ನು ತೋರುವ ತಾಯಿಯು 'ಇದನ್ನು ಮಾಡು, ಇದನ್ನು ಬಿಡು, ಇದನ್ನು ತಿನ್ನು, ಇದನ್ನು ತಿನ್ನಬೇಡ' – ಎಂದು ಬುದ್ಧಿಹೇಳುತ್ತಿರುವಂತೆ ಶ್ರುತಿಯು ಮನುಷ್ಯಜಾತಿಗೆಲ್ಲ ಈ ಉಪದೇಶವನ್ನು ಮಾಡುತ್ತಿರುವದು. ''ಮನುಷ್ಯರಿರಾ, ನಿಮಗೆ ಒಳ್ಳೆಯದಾಗಬೇಕಾದರೆ ನೀವು ಯಾವಾಗಲೂ ನಾನು ವಿಧಿಸಿರುವ ಕರ್ಮಗಳನ್ನೇ ಮಾಡಿರಿ ; ಮಾಡಿದ ಕರ್ಮಕ್ಕೆ ಫಲವು ಅವಶ್ಯವಾಗಿ ಆಗಿಯೇ ತೀರುತ್ತದೆ. ಇದು ನಿಯಮವು. ನಿಮಗೆ ಒಳ್ಳೆಯ ಫಲವೇ ಆಗುತ್ತಿರಬೇಕಾದರೆ ಕೆಟ್ಟಕರ್ಮದ ಫಲವು ಎಂದಿಗೂ ಅಂಟದೆ ಇರಬೇಕಾದರೆ ನಾನು ಬೇಡವೆಂದ ಕರ್ಮಗಳನ್ನು ಮಾಡಬೇಡಿರಿ. ಮಾಡಿರೆಂದು ಹೇಳುವ ಕರ್ಮಗಳನ್ನೇ

ಮಾಡುತ್ತಿರಿ''. ಇನ್ನು ಶಾಸ್ತ್ರೋಕ್ತವಾದ ಕರ್ಮಗಳನ್ನೇ ಮಾಡಿಕೊಂಡು ಕೆಟ್ಟಫಲವು ಯಾವದೂ ಅಂಟದಂತೆ ಮಾಡಿಕೊಳ್ಳುವದು ಹೇಗೆಂಬುದನ್ನು ಮುಂದೆ ತಿಳಿಸಲಾಗುವುದು.

(ಮೂಲ)

ಅಸುರ್ಯಾ ನಾಮ ತೇ ಲೋಕಾ ಅಂಧೇನ ತಮಸಾವೃತಾಃ।
ತಾಗ್ಂಸ್ತೇ ಪ್ರೇತ್ಯಾಭಿಗಚ್ಛನ್ತಿ ಯೇ ಕೇ ಚಾತ್ಮಹನೋ ಜನಾಃ॥

''ಆತ್ಮಹತ್ಯೆಯನ್ನು ಮಾಡಿಕೊಳ್ಳುವ ಜನರು ಯಾರೇ ಆಗಲಿ, ಅವರು ಕುರುಡುಗತ್ತಲೆಯಿಂದ ಮುಸುಕಿರುವ ಅಸುರಲೋಕಗಳಿವೆಯಷ್ಟೆ ! ಅವುಗಳನ್ನು ಸೇರುವರು.''

ಪರಮಾತ್ಮನೊಬ್ಬನೇ ಎಲ್ಲವೂ ಆಗಿರುವನು. ಆತನಿಗಿಂತ ಬೇರೆಯಾಗಿ ಯಾವದೊಂದೂ ಇರುವದಿಲ್ಲ – ಎಂಬ ಉತ್ತಮವಾದ ತಿಳಿವಳಿಕೆಯನ್ನು ಸಂಪಾದಿಸಿಕೊಂಡು ಯಾವದೊಂದರಲ್ಲಿಯೂ ಆಸಕ್ತಿಯಿಲ್ಲದ ವೈರಾಗ್ಯದಿಂದ ನಲಿಯುವದೊಂದು, ಶಾಸ್ತ್ರೋಕ್ತವಾದ ಕರ್ಮಗಳನ್ನು ಮಾಡುತ್ತಾ ಕರ್ಮದ ಕೆಟ್ಟಫಲವನ್ನಂಟಿಸಿಕೊಳ್ಳದೆ ಸುಖವಾಗಿ ಆಯುಸ್ಸನ್ನು ಕಳೆಯುವದೊಂದು – ಹೀಗೆ ಎರಡು ಮಾರ್ಗಗಳನ್ನು ತಿಳಿಸಿಕೊಟ್ಟದ್ದಾಯಿತಷ್ಟೆ ! ಇವೆರಡರಲ್ಲಿ ಯಾವದು ಉತ್ತಮವಾದದ್ದು? ಎಂಬುದಕ್ಕೆ ಈಗ ಉತ್ತರವನ್ನು ಹೇಳುತ್ತಾರೆ.

ಜೀವನಕ್ಕೆ ಯಾವದೊಂದೂ ಹೆಗ್ಗುರಿಯಿಲ್ಲದೆ ಮನಸ್ಸಿಗೆ ತೋಚಿದಂತೆ ನಡೆಯುವದಕ್ಕಿಂತ ಶಾಸ್ತ್ರದಲ್ಲಿ ಹೇಳಿರುವ ಕರ್ಮಗಳನ್ನು ಅನುಸರಿಸುವ ಕರ್ಮ ಮಾರ್ಗವು ಉತ್ತಮವಾದದ್ದೇ ಸರಿ. ಆದರೆ ಅದರಲ್ಲಿ ದೇಹಾಭಿಮಾನವೆಂಬ ದೊಡ್ಡ ದೋಷವಿರುವದು. ಶಾಸ್ತ್ರದಲ್ಲಿ ಮಾಡಬಾರದೆಂದು ಹೇಳಿರುವ ಕರ್ಮವನ್ನು ಮಾಡುವವರು, ಮಾಡಬಹುದೆಂದು ಹೇಳಿರುವ ಕಾಮ್ಯಕರ್ಮಗಳನ್ನು ಮಾಡಿ ಅವುಗಳ ಫಲವನ್ನನುಭವಿಸುವವರು, ಕಾಮ್ಯನಿಷಿದ್ಧಗಳನ್ನು ಬಿಟ್ಟು ಕೇವಲ ನಿತ್ಯಕರ್ಮಗಳನ್ನು ಮಾಡುವವರು, ಎಲ್ಲರೂ ದೇಹಾಭಿಮಾನಿಗಳೇ ಆಗಿರುತ್ತಾರೆ. ಅವರಿಗೆಲ್ಲ ಇಂಥ ಕರ್ಮವನ್ನು ಮಾಡಿ ಇಂಥ ಫಲವನ್ನು ಪಡೆಯಬೇಕು– ಎಂಬ ಬಲವಾದ ಬಯಕೆಯೊಂದು ಇರುತ್ತದೆ. ಬರಿಯ ವಿಹಿತಕರ್ಮಗಳನ್ನು ತಕ್ಕಂತೆ ಮಾಡಿ ಉತ್ತಮವಾದ ದೇವತಾಜನ್ಮವೇ ಮುಂತಾದ ಫಲಗಳನ್ನು ಪಡೆಯುವವರು ಕೂಡ ದೇಹಾಭಿಮಾನಿಗಳಾಗಿರುತ್ತಾರೆ. ಆದ್ದರಿಂದ ಇವರೆಲ್ಲರನ್ನೂ ಇಲ್ಲಿ ಅಸುರರು – ಎಂದರೆ ಸ್ವಾರ್ಥಪರರು– ಎಂದು ಕರೆದಿರುತ್ತದೆ.

ಈ ಅಸುರರಲ್ಲಿ ಎಷ್ಟೇ ತಾರತಮ್ಯವಿರಲಿ, ಇವರಿಗೆಲ್ಲ ಒಂದು ಸಮಾನ ಧರ್ಮವಿರುತ್ತದೆ. ಅದೇನೆಂದರೆ ಇವರಿಗೆ ಆತ್ಮಸ್ವರೂಪವು ತಿಳಿಯದು. ಅನಾತ್ಮವಾದ ದೇಹಾದಿಗಳಲ್ಲಿಯೇ ನಾನೆಂಬ ಬುದ್ಧಿಯು ಬಲವಾಗಿ ಬೇರೂರಿಕೊಂಡಿರುತ್ತದೆ. ಹೀಗೆ ಅನಾತ್ಮವನ್ನೇ ಆತ್ಮವೆಂದು ತಿಳಿದುಕೊಂಡಿರುವದರಿಂದ ಇವರು ಆ ಸುಳ್ಳಾದ ಆತ್ಮನಿಗೆ ಎಂದರೆ ಅನಾತ್ಮಕ್ಕೆ ಬೇಕಾದ ಭೋಗಸಾಮಗ್ರಿಗಳನ್ನೇ ಒದಗಿಸಿಕೊಳ್ಳುವದಕ್ಕೆ ಹವಣಿಸುತ್ತಿರುತ್ತಾರೆ. ಇವರುಗಳು ತಮ್ಮತಮ್ಮ ಬುದ್ಧಿಗೆ ತಕ್ಕಂತೆ ಅವಿವೇಕದಿಂದ ತಾಮಸಕರ್ಮವಾದ ಕೊಲೆ, ಹಿಂಸೆ– ಮುಂತಾದವುಗಳನ್ನೋ ಕೃಷಿ, ವಾಣಿಜ್ಯ – ಮುಂತಾದವುಗಳನ್ನೋ ಶಾಸ್ತ್ರೋಕ್ತವಾದ ಕಾಮ್ಯಕರ್ಮಗಳನ್ನೋ ಅಥವಾ ನಿತ್ಯಕರ್ಮಗಳನ್ನೋ ಉಪಾಸನೆಗಳನ್ನೋ ಮಾಡುತ್ತಲಿರುತ್ತಾರೆ. ಆಯಾ ಕರ್ಮದಿಂದ ತಮಗೆ ಬೇಕಾದ ಉತ್ತಮಫಲವು ಆಗುವದೆಂದು ಅವರು ಭಾವಿಸಿಕೊಂಡಿರುತ್ತಾರೆ. ಅದರಂತೆ ಅವರಿಗೆ ಆಗಿಯೂತೀರುತ್ತದೆ. ಕರ್ಮಕ್ಕೆ ತಕ್ಕ ಫಲವಾಗುವದೆಂಬುದು ಒಂದು ಮಹಾನಿಯಮವು. ಈ ನಿಯಮವನ್ನು ಮೀರುವದು ಯಾರೊಬ್ಬರಿಂದಲೂ ಆಗಲಾರದು. ಅತ್ಯುತ್ಕಟವಾದ ಪುಣ್ಯಪಾಪಗಳಿಗೆ ಈ ಜನ್ಮದಲ್ಲಿಯೇ ತಕ್ಕ ಒಳ್ಳೆಯ ಅಥವಾ ಕೆಟ್ಟ ಫಲವು ಆಗಿಬಿಡುತ್ತದೆ. ಆದರೆ ಎಲ್ಲಾ ಕರ್ಮಗಳಿಗೂ ಹಾಗೆ ಇಲ್ಲಿಯೇ ಆಗುವ ಸಂಭವವೂ ಇಲ್ಲ ; ಆಗುವದು ಶಕ್ಯವೂ ಅಲ್ಲ. ಆದ್ದರಿಂದ ಅವರವರ ಮನೋಭಾವನೆಗೆ ತಕ್ಕಂತೆ ಆಯಾ ಕರ್ಮಗಳ ಫಲವನ್ನು ಅನುಭವಿಸುವದಕ್ಕೆ ತಕ್ಕಂತೆ ಅವರು ಬೇರೊಂದು ಜನ್ಮವನ್ನೂ ಅದರಲ್ಲಿ ಆಯಾ ಫಲಭೋಗಕ್ಕೆ ಹೊಂದಿಗೆಯಾಗುವ ಸನ್ನಿವೇಶಗಳನ್ನೂ ಪಡೆಯುತ್ತಾರೆ. ಇವೇ ಕರ್ಮಫಲಭೋಗಕ್ಕೆ ಬೇಕಾದ ಲೋಕಗಳೆನಿಸುವವು.

ಇವರು ಮಾಡುವ ಕರ್ಮವು ಬಗೆಬಗೆಯಾಗಿರುವದರಿಂದ ಅದರ ಫಲವೂ ಬಗೆಬಗೆಯಾಗಿರುವದು ನ್ಯಾಯವೇ ಆಗಿದೆಯಷ್ಟೆ. ಆದ್ದರಿಂದಲೇ ದೇವತೆಗಳು, ಮನುಷ್ಯರು, ಪಶುಪಕ್ಷಿಮೃಗಾದಿಗಳು, ಮರಗಿಡಗಳು– ಮುಂತಾದ ಬಗೆಬಗೆಯ ಪ್ರಾಣಿಗಳು ಪ್ರಪಂಚದಲ್ಲಿ ಕಂಡುಬರುತ್ತವೆ. ಆದರೆ ಒಂದು ವಿಷಯವನ್ನು ನಾವು ನೆನಪಿಡಬೇಕು. ಯಾವ ಪ್ರಾಣಿಗೆ ಎಷ್ಟೇ ಉತ್ತಮವಾದ ಜನ್ಮವು ಬಂದಿರಲಿ, ಅಥವಾ ಎಷ್ಟೇ ಕೀಳಾದ ಜನ್ಮವು ಬಂದಿರಲಿ, ದೇಹಾಭಿಮಾನವು ತಪ್ಪಿರುವದಿಲ್ಲ. ದೇಹಾಭಿಮಾನದಿಂದಾಗುವ ಸುಖದುಃಖಗಳ ಹೊಯ್ದಾಟವೂ ತಪ್ಪಿದ್ದಲ್ಲ. ಇದೇತಕ್ಕೆ ? ಎಂದರೆ ಈ ಪ್ರಾಣಿಗಳೆಲ್ಲವೂ ಹಿಂದಿನಜನ್ಮದಲ್ಲಿ ಆಸುರಸ್ವಭಾವವನ್ನು

ವಹಿಸಿ ಅನಾತ್ಮವನ್ನೇ ಆತ್ಮನೆಂದು ತಿಳಿದುಕೊಂಡು ಕರ್ಮಗಳನ್ನು ಮಾಡಿರುತ್ತವೆ. ತಮ್ಮ ನಿಜವಾದ ಆತ್ಮನನ್ನು ಕೊಂದುಹಾಕಿ ಅನಾತ್ಮವನ್ನು ಮೇಲಕ್ಕೇರಿಸಿಕೊಂಡು ಬಿಟ್ಟಿವೆ. ಆ ಮಹಾಪಾಪದ ಫಲವಾಗಿ ಅವಕ್ಕೆ ಈ ಸಂಸಾರದ ತೊಳಲು ಗಂಟು ಬಿದ್ದಿರುತ್ತದೆ. ಸರಿಯಾಗಿ ನೋಡಿದರೆ ಆತ್ಮನನ್ನು ಕೊಲ್ಲುವದು ಯಾರಿಂದಲೂ ಆಗುವದಿಲ್ಲವಾದರೂ ಆ ಆತ್ಮನು ಸತ್ತುಹೋಗಿದ್ದರೆ ಹೇಗೋ ಹಾಗೆ ಅವನನ್ನು ಪೂರ್ತಿಯಾಗಿ ಮರೆತುಬಿಟ್ಟು ಅನಾತ್ಮದಲ್ಲಿಯೇ ನಾನೆಂಬ ಅಭಿಮಾನವನ್ನು ಮಾಡಿಕೊಂಡಿದ್ದದ್ದೇ ಈ ಪ್ರಾಣಿಗಳು ಮಾಡಿದ ಆತ್ಮಹತ್ಯವು. ಈ ಆತ್ಮಹತ್ಯದ ಫಲವಾಗಿ ಈಗಲೂ ಅವುಗಳಿಗೆ ಈ ಜನ್ಮಗಳು ಬಂದಿರುತ್ತವೆ.

ಆತ್ಮಹತ್ಯವನ್ನು ಮಾಡಿಕೊಳ್ಳುವದು ಪಾಪವೆಂದು ಶಾಸ್ತ್ರಗಳಲ್ಲಿ ಹೇಳಿರುತ್ತದೆ. ಏಕೆಂದರೆ ತಾನಾಗಿ ಒದಗಿದ್ದ ಶರೀರಾದಿಗಳನ್ನು ಸರಿಯಾಗಿ ಉಪಯೋಗಿಸದೆ ಅವುಗಳನ್ನು ತುಚ್ಛವಾಗಿ ಕಂಡದ್ದರ ಫಲವಾಗಿ ಆತ್ಮಘಾತುಕರಿಗೆ ನರಕವು ಪ್ರಾಪ್ತಿಯಾಗುವದು. ಆದರೆ ಅನಾತ್ಮನನ್ನು ಉಪಾಸನೆಮಾಡುವ ಆತ್ಮಘಾತುಕರಿಗೆ ಆಗುವ ಫಲವು ನರಕಕ್ಕಿಂತಲೂ ಹೆಚ್ಚಾಗಿರುವದು. ಏಕೆಂದರೆ ಆ ನರಕವು ಸ್ವಲ್ಪ ಕಾಲಮಾನವಿರುವದು. ಆದರೆ ಸಂಸಾರವೆಂಬ ಈ ನರಕವು ಕೊನೆಗಾಣದಂತೆ ನಡೆದೇ ಇರುವದು. ಇಷ್ಟೇ ಅಲ್ಲ. ಅಂಧಂತಮಸ್ಸೆಂಬ ಕಗ್ಗತ್ತಲೆಯ ನರಕಕ್ಕಿಂತಲೂ ಹೆಚ್ಚಾದ ಅಜ್ಞಾನಕತ್ತಲೆಯು ಈ ಅಸುರಲೋಕಗಳಲ್ಲಿ ಯಾವಾಗಲೂ ಕವಿದುಕೊಂಡಿರುವದು. ಕತ್ತಲೆಯಲ್ಲಿರುವವರು ಮುಂಗಾಣದೆ ತಡವರಿಸುತ್ತಲೂ ಮುಗ್ಗರಿಸುತ್ತಲೂ ನಡೆಯುವಂತೆ ಈ ಪ್ರಾಣಿಗಳೆಲ್ಲರೂ ಹಿಗ್ಗುತ್ತಲೂ ಮುಗ್ಗುತ್ತಲೂ ಹೊಯ್ದಾಡುತ್ತಾ ಸಂಸಾರವನ್ನು ಅನುಭವಿಸುತ್ತಿರುವವು. ಆದ್ದರಿಂದ ಪುಣ್ಯವಂತರಿಗೆ ನರಕವನ್ನು ಕಂಡರೆ, ಅದರ ಹೆಸರನ್ನು ಕೇಳಿದರೆ ಮೈ ಜುಮ್ಎನ್ನುವಂತೆ ವಿವೇಕಿಗಳಾದವರಿಗೆ ಕರ್ಮಮಾರ್ಗದಿಂದ ಸಿಕ್ಕುವ ಅತ್ಯಂತ ಉತ್ತಮಜನ್ಮದ ಹೆಸರನ್ನು ಹೇಳಿದರೆ ಕೂಡ ಮೈ ಜುಮ್ಮೆನ್ನುತ್ತಿರುವದು. ಅವರಿಗೆ ಪರಮಾತ್ಮನಿಷ್ಠೆಯೊಂದು ಬಿಟ್ಟು ಮತ್ತೆ ಯಾವ ಮಾರ್ಗವೂ ಸೊಗಸುವದಿಲ್ಲ.

(ಮೂಲ)

ಅನೇಜದೇಕಂ ಮನಸೋ ಜವೀಯೋ
ನೈನದ್ದೇವಾ ಆಪ್ನುವನ್ ಪೂರ್ವಮರ್ಷತ್ ।
ತದ್ಧಾವತೋಽನ್ಯಾನತ್ಯೇತಿ ತಿಷ್ಠತ್
ತಸ್ಮಿನ್ನಪೋ ಮಾತರಿಶ್ವಾ ದಧಾತಿ ॥

'ಅದು ಅಲುಗಾಡದಿರುವ ಒಂದೇ ಒಂದು ತತ್ತ್ವವಾಗಿರುವದು. ಆದರೂ ಮನಸ್ಸಿಗಿಂತಲೂ ವೇಗವುಳ್ಳದ್ದು. ಅದನ್ನು ಇಂದ್ರಿಯಗಳು ಹಿಡಿಯಲೇ ಆರವು. ಏಕೆಂದರೆ ಅದು ಮೊದಲೇ ಹೋಗಿಬಿಟ್ಟಿರುತ್ತದೆ. ಅದು ನಿಂತಲ್ಲಿಯೇ ನಿಂತಿದ್ದರೂ ಓಡುವ ಮಿಕ್ಕವರೆಲ್ಲರನ್ನೂ ಮೀರಿಹೋಗಿರುವದು. ಅದರ ಆಧಾರದಿಂದಲೇ ಸೂತ್ರಾತ್ಮನು ಪ್ರಾಣಿಗಳ ಕರ್ಮವನ್ನು ವಿಂಗಡಿಸುತ್ತಿರುವನು.'

ಯಾವ ಆತ್ಮಸ್ವರೂಪವನ್ನು ಕಂಡುಕೊಳ್ಳದೆ ಇರುವದರಿಂದಲೇ ಅಜ್ಞಾನಿ ಜೀವರು ಅಸುರರೆನಿಸಿಕೊಂಡು ಆತ್ಮಹತ್ಯೆಯ ದೋಷಕ್ಕೊಳಗಾಗಿ ಸಂಸಾರಕ್ಕೆ ಪಕ್ಕಾಗಿರುವರೋ ಯಾವ ಆತ್ಮಸ್ವರೂಪವನ್ನು ಕಂಡುಕೊಂಡಮಾತ್ರದಿಂದಲೇ ಅಂಧಂತಮಸ್ಸಿನಿಂದ ಆದಿತ್ಯಲೋಕಕ್ಕೆ ಬಂದಂತೆಯೂ ಆಸುರಸ್ವಭಾವವನ್ನು ಬಿಟ್ಟು ದೈವಸ್ವಭಾವವನ್ನು ಪಡೆದುಕೊಂಡಂತೆಯೂ ಜ್ಞಾನಿಗಳು ನಲಿದಾಡುವರೋ ಆ ಆತ್ಮಸ್ವರೂಪವು ಹೇಗಿರುತ್ತದೆ? ಎಂಬ ಪ್ರಶ್ನೆಗೆ ಈ ಮಂತ್ರದಲ್ಲಿಯೂ ಮುಂದಿನ ಮಂತ್ರದಲ್ಲಿಯೂ ಉತ್ತರವನ್ನು ಹೇಳಿರುತ್ತದೆ.

ಪರಮಾತ್ಮಸ್ವರೂಪವನ್ನು ಅದರ ನಿಜರೂಪಿನಿಂದಲೇ ತಿಳಿದುಕೊಳ್ಳುವದು ಕಡುಕಷ್ಟ. ಏಕೆಂದರೆ ಅದು ಮತ್ತೊಂದರಂತೆ ಇರುವ ವಸ್ತುವಲ್ಲ. ತನ್ನಂತಿರುವ ಅಥವಾ ತನ್ನಂತಿರದ ಎರಡನೆಯ ಸತ್ಯವಸ್ತುವೇ ಇಲ್ಲದಂಥ ಕೇವಲ ಪರಮಾರ್ಥ ತತ್ತ್ವವದು. ಅದು ತನ್ನ ಸ್ವರೂಪದಲ್ಲಿ ಅವಯವವೇ ಮುಂತಾದ ಯಾವ ದೊಂದು ಭೇದವೂ ಇಲ್ಲದ ಒಂದೇ ರೂಪದ ವಸ್ತುವಾಗಿರುತ್ತದೆ. ಆದ್ದರಿಂದ ಅದನ್ನು ಏಕ, ಅದ್ವಿತೀಯ– ಎಂದು ಕರೆಯುತ್ತಾರೆ.

ಆದರೆ ಎಲ್ಲೆಲ್ಲೂ ತುಂಬಿರುವ ವಾಯುವು ಬಿರುಗಾಳಿಯಾಗಿ ಬೀಸಿದೊಡನೆ ನಮಗೆ ಅದರ ಮಹಾಶಕ್ತಿಯು ಗೋಚರವಾಗುವಂತೆ ಆತ್ಮನು ತಾನಿರುವ ರೂಪದಿಂದ ಹೀಗಿರುವನೆಂದು ಹೇಳುವದಕ್ಕೆ ಆಗದೆ ಇದ್ದರೂ ಅವನ ಉಪಾಧಿ ಗಳನ್ನು ಮನಸ್ಸಿಗೆ ತಂದುಕೊಂಡರೆ ಅವನ ಸ್ವರೂಪದ ಮಹಿಮೆಯು ವ್ಯಕ್ತವಾಗುತ್ತದೆ. ಉದಾಹರಣೆಗೆ ಇಂದ್ರಿಯಗಳನ್ನು ನೋಡಿರಿ. ಅವು ಇದ್ದಲ್ಲಿಯೇ ಇರುವಂತೆ ತೋರಿದರೂ ತಮ್ಮ ತಮ್ಮ ವಿಷಯಗಳನ್ನು ಎಷ್ಟು ದೂರದಿಂದ ಗ್ರಹಿಸಿಬಿಡುತ್ತವೆ ? ಮೂಗು ನಮ್ಮೆದುರಿಗೆ ಕಾಣದ ವಸ್ತುವಿನ ವಾಸನೆಯನ್ನು ಹಿಡಿಯುತ್ತದೆ. ಕಿವಿಯು ದೂರದಲ್ಲಿ ಶಬ್ದವಾಗುತ್ತಿರುವ ಧ್ವನಿಯನ್ನೂ ಇಂಥ ಧ್ವನಿಯೆಂದು ಗೊತ್ತುಪಡಿಸಿಬಿಡುತ್ತದೆ. ಕಣ್ಣಂತೂ ಸಾವಿರಗಟ್ಟಲೆಯ ಮೈಲಿಗಳ ದೂರದಲ್ಲಿರುವ ಸೂರ್ಯಚಂದ್ರರನ್ನೂ ನಕ್ಷತ್ರಗ್ರಹಾದಿಗಳನ್ನೂ ರೆಪ್ಪೆಯನ್ನು

ತೆರೆದು ಮರುಕ್ಷಣದಲ್ಲಿಯೇ ಗ್ರಹಿಸಿಕೊಂಡುಬಿಡುತ್ತದೆ. ಕಣ್ಣು, ಕಿವಿ, ಮೂಗು-ಮುಂತಾದವುಗಳಲ್ಲಿರುವ ಇಂದ್ರಿಯಗಳು ಆತ್ಮನ ತೀರ ಹೊರಗಿನ ಉಪಾಧಿಗಳು.

ಇವುಗಳಿಗಿಂತಲೂ ಒಳಗಿರುವ ಮನಸ್ಸು ಆತ್ಮನಿಗೆ ಮತ್ತೊಂದು ಉಪಾಧಿಯು. ಅದರ ಹೆಚ್ಚುಗಾರಿಕೆಯನ್ನು ಹೇಳಬೇಕಾದದ್ದೇ ಇಲ್ಲ. ಏಕೆಂದರೆ ಇಂದ್ರಿಯಗಳಿಗಾದರೂ ಕಾರ್ಯಕ್ಷೇತ್ರವು ಇಷ್ಟೆಂಬ ಅಳತೆಯುಂಟು. ಕಣ್ಣಿನ ನೋಟವು ಸೂರ್ಯಮಂಡಲದಾಚೆಯೂ ಇರಬಹುದಾದ ಸೌರವ್ಯೂಹಗಳನ್ನು ನೋಡಲರಿಯದು. ಕಿವಿಯ ಕೇಳುವಿಕೆಯೂ ಇಂತಿಷ್ಟು ದೂರದಿಂದಾಚೆಗೆ ಇರುವ ಶಬ್ದವನ್ನು ಗೋಚರಪಡಿಸಿಕೊಳ್ಳಲಾರದು – ಇತ್ಯಾದಿ. ಆದರೆ ಮನಸ್ಸಿಗೆ ಇಂಥ ಮಿತಿಯುಂಟೆ ? ಅದು ಇಂದ್ರಿಯಗಳ ಮೂಲಕ ಹೊರಗನ್ನು ಅರಿತುಕೊಳ್ಳು ವದಲ್ಲದೆ ಅವುಗಳ ಸಂಬಂಧವೇ ಇಲ್ಲದೆ ತನ್ನ ಕಲ್ಪನಾಮಾತ್ರದಿಂದಲೇ ಬ್ರಹ್ಮಲೋಕದವರೆಗೂ ಹಾರಿಬಿಡುವದಲ್ಲ ! ಅದರ ವೇಗವು ಎಲ್ಲಕ್ಕೂ ಹೆಚ್ಚಿನ ದೆಂಬುದನ್ನು ನಾವು ಮನೋವೇಗವೆಂಬ ಹೆಸರಿನಿಂದ ವ್ಯವಹಾರದಲ್ಲಿ ಆಗಾಗ್ಗೆ ಒಪ್ಪಿಕೊಳ್ಳುತ್ತಲೇ ಇರುವೆವು.

ಈಗ ಮನಸ್ಸನ್ನೂ ವಿಷಯೀಕರಿಸುವ ನಮ್ಮ ಆತ್ಮನ ವಿಚಾರಕ್ಕೆ ತಿರುಗೋಣ. ಇಂದ್ರಿಯಗಳನ್ನು ಅರಿಯುವದು ಮನಸ್ಸಾದರೆ ಮನಸ್ಸನ್ನೂ ಅರಿಯುವದು ನಮ್ಮಲ್ಲಿ ವ್ಯವಹಾರಗೋಚರವಾಗುವ ಆತ್ಮಭಾವವು. 'ಇದೊ, ನನ್ನ ಮನಸ್ಸು ಈಗ ಈ ಕಡೆಗೆ ಹೊರಳಿತು' ಎಂದು ಯಾವ ಆಯಾಸವೂ ಇಲ್ಲದೆಯೇ ಅರಿಯುವ ಆತ್ಮ ಚೈತನ್ಯದ ಹೊಳಪಿನ ವೇಗವನ್ನು ಬಣ್ಣಿಸಬಲ್ಲವರಾರು ? ಮನಸ್ಸು ಮಿಂಚಿಗಿಂತಲೂ ವೇಗವಾಗಿ ಅರೆಕ್ಷಣದಲ್ಲಿ ಕಾಶಿಯಿಂದ ರಾಮೇಶ್ವರಕ್ಕೂ ಭೂಲೋಕದಿಂದ ಬ್ರಹ್ಮ ಲೋಕಕ್ಕೂ ಹಾದುಹೋಗುವಾಗ ತಾನು ಇದ್ದಲ್ಲಿಯೇ ಇರುವ ಈ ಆತ್ಮಚೈತನ್ಯಾ ಭಾಸವು ಆಹಾ ! ಮನಸ್ಸೆ, ನೀನು ಎಷ್ಟು ವೇಗದಿಂದ ಹಾರಾಡುತ್ತಿರುವೆ ? ಎಂದು ಮೆಚ್ಚಿಕೆಯನ್ನು ತೋರಿಸುವದಕ್ಕೆ ಸಿದ್ಧವಾಗಿರುತ್ತದೆ.

ಆದರೆ ಇದೂ ನಿಜವಾಗಿ ನಮ್ಮ ಆತ್ಮನಲ್ಲ. ಇದು ಆತ್ಮಚೈತನ್ಯದ ಬರಿಯ ಆಭಾಸವು. ನೀರಿನಲ್ಲಿ ಮಾರುಹೊಳೆಯುವ ಸೂರ್ಯಪ್ರತಿಬಿಂಬದಂತೆ ನಮ್ಮ ಮಾನಸಸರೋವರದಲ್ಲಿ ಮಾರುಹೊಳೆದಿರುವ ಈ ಚಿದಾಭಾಸದ ವೇಗವೇ ಇಷ್ಟು. ಇದನ್ನು ಮನಸ್ಸು ಹಿಡಿಯಲಾರದು. ಇಂದ್ರಿಯಗಳಂತೂ ಕಾಣಲೇ ಅರಿಯವು. ಹೀಗಿರುವಲ್ಲಿ ಈ ಚಿದಾಭಾಸನ ಹೊಳಪಿಗೆ ಮೂಲವಾಗಿರುವ, ನೀರಿನ ಪ್ರತಿಬಿಂಬಕ್ಕೆ ಕಾರಣವಾಗಿ ನೀರಿನ ಸಂಬಂಧವೇ ಇಲ್ಲದೆ ಗಗನದಲ್ಲಿ ಹೊಳೆಯು

ತ್ತಿರುವ ಸೂರ್ಯಬಿಂಬದಂತೆ ದೇಹ, ಇಂದ್ರಿಯ, ಪ್ರಾಣ, ಮನಸ್ಸು – ಎಂಬ ಯಾವ ಉಪಾಧಿಗಳ ಸಂಬಂಧವೂ ಇಲ್ಲದೆ ಅವುಗಳೆಲ್ಲವನ್ನೂ ಮೀರಿರುವ ಆಭಾಸ ನಿಗಿಂತಲೂ ದೂರವಾಗಿ ತನ್ನ ಚೈತನ್ಯಪ್ರಕಾಶದಿಂದ ಥಳಗುಟ್ಟುತ್ತಿರುವ ಆತ್ಮನ ನಿರುಪಾಧಿಕಸ್ವರೂಪವನ್ನು ನೆನೆದರೆ ಅದರ ಮಹಿಮೆಯನ್ನು ವರ್ಣಿಸುವದಕ್ಕೆ ಮಾತುಗಳೆಲ್ಲಿಂದ ಬರುವವು ? ಅದು ಮನಸ್ಸಿನ ಕಲ್ಪನೆಗೇ ಮೊದಲು ಎಟಕು ವಂತಿರುವದಿಲ್ಲವಲ್ಲ!

ಈಗ ಪರಮಾತ್ಮಸ್ವರೂಪದ ಕಲ್ಪನೆಯನ್ನು ಒಂದು ಉಪಮಾನದಿಂದ ಮನಸ್ಸಿಗೆ ತಂದುಕೊಳ್ಳಬಹುದು. ಅನಂತವಾದ ಆಕಾಶದಲ್ಲಿ ಹಕ್ಕಿಗಳು ಎಷ್ಟು ವೇಗದಿಂದ ಎಷ್ಟು ದಿನಗಳವರೆಗೆ ಹಾದುಹೋದರೂ ಆಕಾಶದ ಮೊದಲಾಗಲಿ, ಕೊನೆಯಾಗಲಿ ಅವಕ್ಕೆ ಕಂಡುಬಂದೀತೇನು ? ಇಲ್ಲ. ಏಕೆಂದರೆ ಅವುಗಳ ಇರವು, ಹಾರಾಟ ಮುಂತಾದ ಜೀವನವೆಲ್ಲ ಆ ಆಕಾಶದ ಒಂದು ಭಾಗದಲ್ಲಿ ಮಾತ್ರವೇ ನಡೆಯಬೇಕಾಗಿದೆ. ಇದರಂತೆಯೇ ಬ್ರಹ್ಮಾದಿಸ್ತಂಬಪರ್ಯಂತವಾಗಿರುವ ಸಮಸ್ತ ಪ್ರಾಣಿಗಳೂ ಅವುಗಳಿಗೆ ಸಂಬಂಧಪಟ್ಟ ಉಪಾಧಿಗಳೂ ಈ ಹಕ್ಕಿಗಳಂತೆಯೇ ಅನಂತಚಿದಾಕಾಶಸ್ವರೂಪನಾದ ಪರಮಾತ್ಮನ ಆಸರೆಯಲ್ಲಿ ಹುಟ್ಟಿ ತಮ್ಮ ತಮ್ಮ ವ್ಯಾಪಾರವನ್ನು ಮಾಡಿಕೊಂಡಿರುವವು. ಎಲ್ಲರ ದೇಹೇಂದ್ರಿಯವ್ಯಾಪಾರಗಳನ್ನೂ ತನ್ನ ಹಿಡಿತದಲ್ಲಿಟ್ಟಿರುವ ಸೂತ್ರಾತ್ಮನೇ ಈ ಪರಮಾತ್ಮನೆಂಬ ಆಕಾಶದಲ್ಲಿ ಇರವನ್ನು ಪಡೆದುಕೊಂಡು ಅದರ ಆಧಾರದಿಂದಲೇ ತನ್ನ ಅಧಿಕಾರದ ಕರ್ತವ್ಯವನ್ನು ನೆರವೇರಿಸುತ್ತಾ ಇರುವ ಒಂದು ದೊಡ್ಡ ಹಕ್ಕಿಯಂತಿರುವನೆಂದಮೇಲೆ ನಮ್ಮಂಥ ವರ ವಿಷಯವನ್ನು ಹೇಳುವದೇನು ? ನಿಜವಾಗಿ ನಮ್ಮೆಲ್ಲರ ಒಳಗಿನ ಹಾಗೂ ಒಳಗಿನ ಇಂದ್ರಿಯವ್ಯಾಪಾರಗಳ ಮೂಲವೂ ಆ ಪರಮಾತ್ಮನೇ, ಆತನೇ ಎಲ್ಲೆ ಲ್ಲಿಯೂ ತುಂಬಿತುಳುಕಾಡುತ್ತಿರುವನು. ಅವನ ಆಧಾರದಿಂದಲೇ ನಾವು ಇದ್ದು ಕೊಂಡು ನಮ್ಮ ನಮ್ಮ ವ್ಯಾಪಾರವನ್ನು ನಿಯಮದಿಂದ ಮಾಡುತ್ತಿರುವೆವು. ಗಾಳಿ ಬೀಸುವದು, ಬೆಂಕಿ ಸುಡುವದು, ಮೇಘವು ಮಳೆಗರೆಯುವದು, ನೀರು ಹರಿ ಯುವದು – ಈ ವ್ಯಾಪಾರನಿಯಮಗಳೆಲ್ಲ ಆ ಅನಂತಾಕಾಶದಲ್ಲಿಯೇ ನಡೆಯು ತ್ತಿರುವದು.

(ಮೂಲ)

**ತದೇಜತಿ ತನ್ನೈಜತಿ ತದ್ದೂರೇ ತದ್ವಂತಿಕೇ।**
**ತದಂತರಸ್ಯ ಸರ್ವಸ್ಯ ತದು ಸರ್ವಸ್ಯಾಸ್ಯ ಬಾಹ್ಯತಃ॥**

"ಅದು ಅಲುಗಾಡುತ್ತದೆ. ಅದು ಅಲುಗಾಡುವದಿಲ್ಲ. ಅದು ದೂರದಲ್ಲಿ ಇರುವದು. ಅದೇ ಹತ್ತಿರದಲ್ಲಿರುವದು. ಅದು ಎಲ್ಲದರ ಒಳಗೂ ಇರುವದು ; ಅದೇ ಇದೆಲ್ಲದರ ಹೊರಗೂ ಇರುವದು".

ಪರಮಾತ್ಮಸ್ವರೂಪವನ್ನು ವರ್ಣಿಸುವದಕ್ಕೆ ಹೊರಟರೆ ಅದು ಹೇಗಿರುವದೆಂದು ನಿರ್ಣಯಿಸಿ ಹೇಳುವದಕ್ಕೆ ಬರುವದೇ ಇಲ್ಲ. ಏಕೆಂದರೆ ಅದನ್ನು ದ್ರವ್ಯವೆಂದಾಗಲಿ ಗುಣವೆಂದಾಗಲಿ ಕ್ರಿಯೆಯೆಂದಾಗಲಿ ಹೇಳುವದಕ್ಕೆ ಬರುವಂತಿರುವದಿಲ್ಲ. ಆ ಸ್ವರೂಪದಲ್ಲಿ ಯಾವದೊಂದು ವಿಕಾರವೂ ಆಗುವಂತಿರುವದಿಲ್ಲ. ಆದರೆ ಲೋಕದಲ್ಲಿ ಆಗುವ ಎಲ್ಲಾ ವಿಕಾರಗಳೂ ಅದರಲ್ಲಿಯೇ ಕಲ್ಪಿತವಾಗಿರುತ್ತವೆ. ಈ ನಮ್ಮ ಹೊರಗಿನ ಪ್ರಪಂಚಭಾಗವನ್ನು ನೋಡಿದರೆ ಅದರಲ್ಲಿ ಯಾವದೊಂದೂ ಇದ್ದಂತೆ ಇರುವದಿಲ್ಲ. ಎಲ್ಲವೂ ಕ್ಷಣಕ್ಷಣಕ್ಕೆ ಮಾರ್ಪಡುತ್ತಲೇ ಇರುತ್ತದೆ. ನಮ್ಮೊಳಗಿನ ಸ್ವರೂಪವನ್ನು ನೋಡಿಕೊಂಡರಂತೂ ಎಲ್ಲವೂ ಸಂತತವಾಗಿ ಹರಿಯುತ್ತಿರುವ ವಿಕಾರಪ್ರವಾಹವಾಗಿರುವದು. ನಮ್ಮ ದೇಹ, ಮನಸ್ಸು, ಬುದ್ಧಿ, ಅಹಂಕಾರ– ಇವುಗಳಲ್ಲಿ ಯಾವದು ತಾನೆ ಇದ್ದಂತೆ ಇರುತ್ತದೆ ? ಪ್ರತಿಯೊಂದೂ ಒಂದೇ ಸಮನೆ ಹರಿಯುತ್ತಿರುವ ನದಿಯಂತೆಯೂ ಬಿಡದೆ ಉರಿಯುತ್ತಿರುವ ದೀಪದಂತೆಯೂ ಮಾರ್ಪಡುತ್ತಲೇ ಇರುತ್ತದೆ. ಹೀಗಿದ್ದರೂ ಈ ಎಲ್ಲಾ ವಿಕಾರಗಳಿಗೂ ಆಧಾರವಾಗಿರುವ ನಮ್ಮ ಸಾಕ್ಷಿಚೈತನ್ಯಸ್ವರೂಪವು ಮಾತ್ರ ಒಂದಿಷ್ಟೂ ಅಚ್ಚಳಿಯದೆ ಎಂದೆಂದಿಗೂ ಇದ್ದಂತೆಯೇ ಇರುವದಲ್ಲ ! ಎಚ್ಚರದಲ್ಲಿಯೂ ಕನಸಿನಲ್ಲಿಯೂ ನಮಗೆ ಕಾಣಿಸಿಕೊಳ್ಳುತ್ತಿರುವ ಆಧ್ಯಾತ್ಮಿಕ ಹಾಗೂ ಆಧಿಭೌತಿಕವಿಕಾರಗಳು ಸುಷುಪ್ತಿಯಲ್ಲಿ ಒಂದಿಷ್ಟೂ ಉಳಿಯದಂತೆ ಒರಸಿ ಹೋಗಲು, ಆಗಲೂ ಆ ನಮ್ಮ ಸ್ವರೂಪವಾದ ಆತ್ಮಚೈತನ್ಯವು ಇದ್ದಂತಯೇ ಇರುವದಲ್ಲ ! ಹೀಗಿರುವದರಿಂದ ಆ ಸ್ವರೂಪವನ್ನು ವಿಕಾರಿಯೆಂದು ಹೇಳುವದೆ ? ನಿರ್ವಿಕಾರಿಯೆಂದು ಹೇಳುವದೆ ? ಒಂದು ದೃಷ್ಟಿಯಿಂದ ಎರಡೂ ಅದೇ. ಮತ್ತೆ ಒಂದು ದೃಷ್ಟಿಯಿಂದ ಅದು ಎರಡೂ ಅಲ್ಲ. ಏಕೆಂದರೆ ಯಾವ ವಿಕಾರವೂ ಇಲ್ಲದೆ ಸುಮ್ಮನಿರುವ ಸ್ಥಿತಿಯೂ ಅದನ್ನು ಬಿಟ್ಟಿಲ್ಲ. ಸಕಲವಿಕಾರಗಳ ದೃಶ್ಯರಾಶಿಯನ್ನು ತೋರ್ಪಡಿಸುವ ಸ್ಥಿತಿಯೂ ಅದನ್ನು ಬಿಟ್ಟಿರುವದಿಲ್ಲ. ಆದ್ದರಿಂದ ಈ ಎರಡೂ ಅದರ ಮಹಿಮೆಯೇ ಎಂದು ಹೇಳಬಹುದು. ವಿಕಾರ, ನಿರ್ವಿಕಾರ – ಎರಡನ್ನೂ ತನ್ನ ಚೈತನ್ಯದಿಂದ ಬೆಳಗುತ್ತಿರುವದರಿಂದ ಅವೆರಡೂ ಅದಕ್ಕೆ ಸಂಬಂಧಪಟ್ಟಿಲ್ಲವೆಂದೂ ಹೇಳಬಹುದು.

ಇದರಂತೆ ಆ ಆತ್ಮಸ್ವರೂಪವು ನಮಗೆ ಹತ್ತಿರವೊ ? ದೂರವೊ ? ಎಂದರೆ ಎರಡೂ ಆಗಿದೆ ; ಎರಡೂ ಅಲ್ಲ – ಎಂದು ಹೇಳಬೇಕಾಗುತ್ತದೆ. ಎಷ್ಟೋ

ದೂರದಲ್ಲಿರುವ ಲೋಕಗಳಾಗಲಿ, ಹಿಂದಿನ ಮಂತ್ರದ ವಿವರಣೆಯಲ್ಲಿ ತಿಳಿಸಿರುವಂತೆ ಮನಸ್ಸಿಗೂ ಅದರಲ್ಲಿ ಹೊಳೆಯುವ ಚಿದಾಭಾಸನಿಗೂ ದೂರವಾಗಿರುವದಿಲ್ಲ. ಅವೆರಡೂ ನಿಜವಾದ ಆತ್ಮಚೈತನ್ಯವನ್ನು ಬಿಟ್ಟಿರುವದಿಲ್ಲ. ಆದ್ದರಿಂದ ಅತ್ಯಂತ ದೂರವಾಗಿರುವದೂ ಆ ಆತ್ಮನಿಗಿಂತ ಬೇರೆಯಾಗಿರುವದಿಲ್ಲ. ಇದರಂತೆ ಅತ್ಯಂತ ಹತ್ತಿರವಿರುವ ನಮ್ಮ ದೇಹಾದಿಗಳೂ ಅವನಿಗಿಂತ ಬೇರೆಯಾಗಿರುವದಿಲ್ಲ. ಆದರೆ ಮತ್ತೊಂದು ದೃಷ್ಟಿಯಿಂದ ನೋಡಿದರೆ ನಮ್ಮ ಆತ್ಮನು ದೂರವೂ ಅಲ್ಲ ; ಹತ್ತಿರವೂ ಅಲ್ಲ. ಏಕೆಂದರೆ ದೂರ, ಹತ್ತಿರ – ಎಂಬ ಮಾತುಗಳು ದೇಶಕ್ಕೂ ಕಾಲಕ್ಕೂ ಹೊಂದತಕ್ಕವು. ದೇಶದಲ್ಲಿ ಎಷ್ಟೇ ದೂರವಿರಲಿ, ಅಥವಾ ಎಷ್ಟೇ ಹತ್ತಿರವಿರಲಿ– ಮತ್ತು ಕಾಲದಲ್ಲಿ ಎಷ್ಟೇ ದೂರ– ಎಂದರೆ ಪ್ರಾಚೀನವಾಗಿರಲಿ, ಅಥವಾ ಎಷ್ಟೇ ಹತ್ತಿರವಿರಲಿ – ಎಂದರೆ ಈಗಿನ ಕಾಲದ್ದಾಗಿರಲಿ – ಎಲ್ಲವೂ ಆತ್ಮಚೈತನ್ಯಕ್ಕೆ ವಿಷಯವೇ ಆದ್ದರಿಂದ ಅದಕ್ಕೆ ಹೊರಚ್ಚೇ ಆಗಿರುತ್ತದೆ. ಈ ದೃಷ್ಟಿಯಲ್ಲಿ ನಮ್ಮ ಆತ್ಮನು ಹತ್ತಿರವೂ ಅಲ್ಲ ; ದೂರವೂ ಅಲ್ಲ.

ಇದೇ ರೀತಿಯಿಂದ ಆತ್ಮನು ನಮ್ಮ ಒಳಗೊ, ಹೊರಗೊ – ಎಂಬ ಪ್ರಶ್ನೆಗೂ ಉತ್ತರವನ್ನು ಹೇಳಬೇಕಾಗಿರುವದು. ಎಲ್ಲೆಲ್ಲಿಯೂ ವ್ಯಾಪಿಸಿರುವ ಆಕಾಶದಲ್ಲಿ ಇಟ್ಟಿರುವ ಗಡಿಗೆಯ ಕಣ್ಣಿನಿಂದ ನೋಡಿದರೆ ಆಕಾಶವು ಅದರ ಒಳಗಿರುವದೊ, ಹೊರಗಿರುವದೊ ? ಒಳಗೂ ಇರುತ್ತದೆ ; ಹೊರಗೂ ಇರುತ್ತದೆ ಅಲ್ಲವೆ ? ಅದರಂತೆ ಚಿದಾಕಾಶರೂಪನಾಗಿರುವ ಪರಮಾತ್ಮನಲ್ಲಿ ನಮ್ಮ ಶರೀರಾದಿಗಳೆಲ್ಲವೂ ಗಡಿಗೆಯಂತೆ ಕಾಣಿಸಿಕೊಳ್ಳುತ್ತಿರುವವು. ಅವುಗಳ ಒಳಗೂ ಆತ್ಮನಿರುತ್ತಾನೆ. ಹೊರಗೂ ಆತ್ಮನಿರುತ್ತಾನೆ. ಆದರೆ ಆಕಾಶದ ಕಣ್ಣಿನಿಂದ ನೋಡಿದರೆ ಆಕಾಶವೇ ಎಲ್ಲೆಲ್ಲಿಯೂ ಇರುವದು. ಅದರ ಆಧಾರದಿಂದ ಅದು ಕೊಟ್ಟ ಅವಕಾಶದಲ್ಲಿ ಗಡಿಗೆಯು ಇದ್ದುಕೊಂಡಿರುವದು. ಹಾಗೆಯೇ ಆತ್ಮಾಕಾಶದಲ್ಲಿ ಅದರ ಆಧಾರ ದಿಂದ ಅದು ಕೊಟ್ಟಿರುವ ಅವಕಾಶದಲ್ಲಿ ನಮ್ಮ ಹೊರಗಿನ ಮತ್ತು ಒಳಗಿನ ಭೂತಗಳೂ ಭೌತಿಕವಸ್ತುಗಳೂ ಇದ್ದುಕೊಂಡಿರುತ್ತವೆ. ನಮ್ಮ ಶರೀರಾದಿಗಳ ದೃಷ್ಟಿಯಿಂದ ಒಳಗು ಹೊರಗು ಎಂಬಿದು ಸರಿಯಾದರೂ ಆತ್ಮದೃಷ್ಟಿಯಿಂದ ಒಳ ಹೊರಗುಗಳಿರುವದೇ ಇಲ್ಲ. ಆದ್ದರಿಂದ ಆತ್ಮನು ನಮ್ಮ ಒಳಗೂ ಇಲ್ಲ; ಹೊರಗೂ ಇಲ್ಲ. ತಾನೇತಾನಾಗಿದ್ದುಕೊಂಡು ಒಳಗುಹೊರಗುಗಳೆರಡನ್ನೂ ತನ್ನಲ್ಲಿಟ್ಟು ಕೊಂಡು ಕಾಪಾಡುತ್ತಿರುತ್ತಾನೆ.

ಹೆಚ್ಚೇನು ? ಈ ಆತ್ಮಚೈತನ್ಯದ ವಿಷಯದಲ್ಲಿ ನಾವು ಯಾವ ಕಲ್ಪನೆಯನ್ನು ಮಾಡಿದರೂ ಅದೆಲ್ಲವೂ ಚೈತನ್ಯದ ಆಧಾರದಿಂದಲೇ ಇರುವರಿಂದ ಆಯಾ

ಕಲ್ಪನೆಯು ಕಲ್ಪಿತಉಪಾಧಿಯ ದೃಷ್ಟಿಯಿಂದ ಸರಿಹೋಗುತ್ತದೆ. ಆದರೆ ಆತ್ಮದೃಷ್ಟಿಯಿಂದ ಯಾವ ಉಪಾಧಿಯನ್ನೂ ಲೆಕ್ಕಿಸದೆ ನೋಡಿದರೆ ಆತ್ಮನೊಬ್ಬನೇ ಇರುವನು. ಅವನಲ್ಲಿ ಒಳಗು, ಹೊರಗು, ಮೇಲು, ಕೆಳಗು, ಹತ್ತಿರ, ದೂರ, ದ್ರವ್ಯ, ಅದ್ರವ್ಯ, ಗುಣ, ಅಗುಣ, ಕ್ರಿಯೆ, ಅಕ್ರಿಯೆ, ಸಂಖ್ಯೆ, ಸಂಖ್ಯಾತೀತತ್ವ – ಮುಂತಾದ ಎಲ್ಲಾ ಕಲ್ಪನೆಗಳೂ ಬಿಸಿಲುಕುದುರೆಯಲ್ಲಿ ತೋರುವ ಜಲದಂತೆ ತೋರಿಕೊಳ್ಳುತ್ತಿರುವವು. ದೃಷ್ಟಾಂತದ ನೀರು ಹೇಗೆ ತನ್ನ ಆಧಾರವಾಗಿರುವ ಮರಳುಬಯಲನ್ನು ಒದ್ದೆಮಾಡದೆ ಇರುವದೋ ಹಾಗೆ ದಾರ್ಷ್ಟಾಂತಿಕದಲ್ಲಿಯೂ ನಮ್ಮ ವ್ಯವಹಾರದ ಯಾವದೊಂದು ಕಲ್ಪನೆಯೂ ತನ್ನ ಸ್ವಭಾವವನ್ನು ಆತ್ಮ ಚೈತನ್ಯಕ್ಕೆ ಅಂಟಿಸಲಾರದೆ ಇರುವದು. ಆದ್ದರಿಂದ ಸಕಲವೂ ನಿರ್ವಿಕಲ್ಪವಾದ ಅಖಂಡಚೈತನ್ಯಮಾತ್ರವಾದ ಪರಮಾತ್ಮಸ್ವರೂಪವೇ– ಎಂದು ಸಿದ್ಧವಾಯಿತು.

(ಮೂಲ)

ಯಸ್ತು ಸರ್ವಾಣಿ ಭೂತಾನಿ ಆತ್ಮನ್ಯೇವಾನುಪಶ್ಯತಿ ।
ಸರ್ವಭೂತೇಷು ಚಾತ್ಮಾನಂ ತತೋ ನ ವಿಜುಗುಪ್ಸತೇ ॥
ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾಭೂದ್ವಿಜಾನತಃ।
ತತ್ರ ಕೋ ಮೋಹಃ ಕಃ ಶೋಕಃ ಏಕತ್ವಮನುಪಶ್ಯತಃ ॥

'ಯಾವನಾದರೆ ಸರ್ವಭೂತಗಳನ್ನೂ ಆತ್ಮನಲ್ಲಿಯೇ ಕಂಡುಕೊಳ್ಳುವನೋ ಮತ್ತು ಸರ್ವಭೂತಗಳಲ್ಲಿಯೂ ಆತ್ಮನನ್ನೇ ಕಾಣುವನೋ ಅವನು ಯಾವದನ್ನೂ ನಿಂದಿಸುವದಿಲ್ಲ. ತಿಳಿದವನಿಗೆ ಎಲ್ಲಿ ಸರ್ವಭೂತಗಳೂ ಆತ್ಮನೇ ಎಂದಾಗುವದೋ ಅಲ್ಲಿ ಏಕತ್ವವನ್ನು ಕಂಡುಕೊಂಡಿರುವ ಆತನಿಗೆ ಯಾವ ಮೋಹವು ? ಯಾವ ಶೋಕವು ?'

ಆತ್ಮಸ್ವರೂಪವನ್ನು ಎರಡು ದೃಷ್ಟಿಗಳಿಂದ ನೋಡಬಹುದು. ನಮಗೆ ವ್ಯವಹಾರದಲ್ಲಿ ಕಾಣಿಸುವ ಉಪಾಧಿಗಳನ್ನು ಲೆಕ್ಕಕ್ಕಿಟ್ಟುಕೊಂಡು ನೋಡುವ ದೃಷ್ಟಿಯೊಂದು. ಅವುಗಳನ್ನು ಗಣಿಸದೆ ಆತ್ಮನು ಇರುವಂತೆಯೇ ನೋಡುವ ದೃಷ್ಟಿಯು ಮತ್ತೊಂದು. ಮೊದಲಿನ ದೃಷ್ಟಿಯಿಂದ ನೋಡಿದರೆ ಆತ್ಮನು ದ್ರವ್ಯ, ಗುಣ, ಕ್ರಿಯೆ, ಸಂಬಂಧ, ಸಾಮಾನ್ಯ, ವಿಶೇಷ, ಅಭಾವ– ಎಲ್ಲವೂ ಆಗಿರುತ್ತಾನೆ. ಅವುಗಳಿಗಿರುವ ವಿಕಾರಗಳೆಲ್ಲವೂ ಅವನಿಗೇ ಸೇರಿರುವಂತೆಯೇ ಕಾಣುತ್ತಿರುತ್ತದೆ. ಆದರೆ ಆತ್ಮನು ಇರುವಂತೆಯೇ ನೋಡುವ ದೃಷ್ಟಿಯಿಂದ ನೋಡಿದರೆ ಅವನಿಗೆ ಉಪಾಧಿಗಳ ಯಾವ ಧರ್ಮವೂ ತಟ್ಟುವಹಾಗಿರುವದಿಲ್ಲ. ಆದ್ದರಿಂದ ಅವನು

ಪರಮಾರ್ಥವಾಗಿ ದ್ರವ್ಯ ಗುಣ ಮುಂತಾದ ಯಾವದೊಂದೂ ಅಲ್ಲ; ಅವನು ನಿರ್ವಿಕಾರನೂ ನಿತ್ಯಶುದ್ಧಬುದ್ಧಮುಕ್ತಸ್ವರೂಪನೂ ಆಗಿರುತ್ತಾನೆ.

ಆತ್ಮನು ಇರುವಂತೆಯೇ ನೋಡುವ ಪರಮಾರ್ಥದೃಷ್ಟಿಯಲ್ಲಿ ಅವನು ಎಲ್ಲಕ್ಕೂ ಸಾಕ್ಷಿಯಾಗಿರುತ್ತಾನೆ – ಎಂದರೆ ಎಲ್ಲವನ್ನೂ ತನ್ನ ಚೈತನ್ಯದ ಬೆಳಕಿಗೆ ವಿಷಯವಾಗಿ ಮಾಡಿಕೊಂಡಿರುತ್ತಾನೆ. ಆದ್ದರಿಂದ ಈ ಆತ್ಮನು ಒಬ್ಬನೇ. ಇವನ ಸರಿಯಾದ ಇರವಿನ ಮತ್ತೊಂದು ಎರಡನೆಯ ವಸ್ತುವಿರುವದಿಲ್ಲ. ಯಾವ ಯಾವದು ಈ ಸಾಕ್ಷಿಗೆ ಗೋಚರವಾಗಿರುವದೋ ಅದೆಲ್ಲವೂ ಜಡವಾಗಿರುತ್ತದೆ. ವಿಕಾರಿಯಾಗಿರುತ್ತದೆ. ಈ ಸಾಕ್ಷಿಚೈತನ್ಯದ ಬೆಳಕಿನ ಬಲದಿಂದ ತೋರಿಕೊಳ್ಳಬಲ್ಲದ್ದಾಗಿರುವದೇ ಹೊರತು ತಾನೇ ತೋರಿಕೊಳ್ಳಬಲ್ಲದ್ದಲ್ಲ. ಆದ್ದರಿಂದ ಈ ಆತ್ಮನಿಗೆ ಎರಡನೆಯದೆನಿಸಿಕೊಳ್ಳಬಲ್ಲದ್ದೇ ಇಲ್ಲ. ಆದ್ದರಿಂದ ಇದು ಅದ್ವಿತೀಯವಾಗಿ ಇರುತ್ತದೆ.

ಆತ್ಮನಿಗಿಂತ ವಿಲಕ್ಷಣಸ್ವಭಾವದ್ದಾಗಿ ಅದಕ್ಕೆ ಎರಡನೆಯದೆಂದು ಹೇಳಿಸಿಕೊಳ್ಳಬಲ್ಲ ಎರಡನೆಯ ವಸ್ತುವೇ ಇಲ್ಲವೆಂದು ಮೇಲೆಕಂಡ ವಿಚಾರಗಳಿಂದ ಸಿದ್ಧವಾಗಬಹುದು. ಆದರೆ ಪ್ರತಿಯೊಂದು ಶರೀರಾದಿಗಳ ಗುಂಪಿಗೂ ಒಬ್ಬೊಬ್ಬ ಆತ್ಮನಿರುವನೆಂದು ವ್ಯವಹಾರದಲ್ಲಿ ಕಂಡುಬರುತ್ತಿದೆಯಲ್ಲ, ಇದಕ್ಕೇನು ಗತಿ ? ನಮಗೆ ಪ್ರತಿದಿನವೂ ತೋರಿಬರುತ್ತಿರುವ ಈ ಆತ್ಮಾನೇಕತ್ವವನ್ನು ಅಲ್ಲಗಳೆಯಬಹುದೆ ? ಎಂದು ಯಾರಾದರೂ ಕೇಳಬಹುದು. ಇದಕ್ಕೆ ಉತ್ತರವನ್ನು ಹಿಂದೆ ನಾಲ್ಕನೆಯ ಮಂತ್ರದ ವ್ಯಾಖ್ಯಾನದಲ್ಲಿಯೇ ಕೊಟ್ಟಿರುತ್ತದೆ. ಒಂದೊಂದು ಶರೀರಾದ್ಯುಪಾಧಿಗಳ ಗುಂಪಿಗೂ ಒಬ್ಬೊಬ್ಬ ಆತ್ಮನಿರುವಂತೆ ತೋರಿದರೂ ಆ ತೋರಿಕೆಯು ನಿಜವಾದ ಆತ್ಮನಲ್ಲ. ಅದು ಆತ್ಮಾಭಾಸವು. ಅದರ ಹೊಳಪಿಗೆ ಮೂಲವಾಗಿರುವ ಆತ್ಮನನ್ನೇ ನಾವು ಇಲ್ಲಿ ಏಕನೆಂದೂ ಅದ್ವಿತೀಯನೆಂದೂ ಕರೆದಿರುವದು. ಅವನು ಬ್ರಹ್ಮನು ಮೊದಲುಮಾಡಿ ಮರಗಿಡಗಳಂಥ ಸ್ಥಾವರಪ್ರಾಣಿಗಳಲ್ಲಿಯೂ ಒಬ್ಬನೇ ಆತ್ಮನಾಗಿರುತ್ತಾನೆ. ಅವನೇ ನಮ್ಮ ನಿಜವಾದ ಆತ್ಮನು. ಅವನಲ್ಲಿಯೇ ಮೇಲೆ ಕಂಡ ಉಪಾಧಿಗಳೆಲ್ಲವೂ ಹುಟ್ಟಿತೋರಿಕೊಂಡು ಮೈಗರೆಯುತ್ತಿರುವವು.

ವೇದಾಂತದಲ್ಲಿ ಹೇಳಿರುವ ಈ ಬಗೆಯ ವಿಚಾರದಿಂದ ಆತ್ಮನು ಒಬ್ಬನೇ. ಅವನಿಗೆ ಎರಡನೆಯದು ಯಾವದೊಂದೂ ಇರುವದಿಲ್ಲ – ಎಂಬ ಅರಿವನ್ನು ಯಾವನು ಗಟ್ಟಿಯಾಗಿ ಮಾಡಿಕೊಂಡಿರುವನೋ ಅವನಿಗೆ ಮತ್ತೊಂದು ವಸ್ತುವು ಅಪ್ರಿಯವಾಗಿ ದ್ವೇಷ್ಯವಾಗಿರುವದಿಲ್ಲ. ಆದ್ದರಿಂದ ಇಂಥದ್ದೊಂದು ತನ್ನ ದುಃಖಕ್ಕೆ

ಕಾರಣವಾಗಿರುವದೆಂದು ಅವನು ಯಾವದನ್ನೂ ಹಳಿಯುವ ಅವಶ್ಯಕತೆ ಬೀಳುವದಿಲ್ಲ. "ತತೋ ನ ವಿಜುಗುಪ್ಸತೇ" ಎಂಬ ವಚನಭಾಗದ ಸ್ವಾರಸ್ಯವೇ ಇದು. ಮಾಧ್ಯಂದಿನಪಾಠದಲ್ಲಿ "ತತೋ ನ ವಿಚಿಕಿತ್ಸತಿ" (ಅದರಿಂದ ಅವನು ಸಂಶಯಪಡುವದಿಲ್ಲ) ಎಂದಿದೆ. ಆತ್ಮಸ್ವರೂಪಕ್ಕಿಂತ ಮತ್ತೊಂದು ಇರುವವರೆಗೂ ಸಂಶಯಪರಂಪರೆಯು ತಪ್ಪಿದ್ದಲ್ಲವೆಂಬುದನ್ನೂ ಆತ್ಮೈಕ್ಯವನ್ನು ಕಂಡುಕೊಂಡ ಕೂಡಲೆ ಸಂಶಯಗಳೆಲ್ಲ ಹೋಗಿ ವಿಚಾರವು ಮುಂದುವರೆಯಬೇಕಾದ ಅವಶ್ಯಕತೆಯೇನೂ ಇಲ್ಲದೆ ನಾವು ಕೃತಕೃತ್ಯರಾಗುವೆವೆಂಬುದನ್ನೂ ಆ ಪಾಠವು ತಿಳಿಸಿಕೊಡುವದು.

ಹೀಗೆ ಬ್ರಹ್ಮಾದಿಸಮಸ್ತಭೂತಗಳಲ್ಲಿಯೂ ಒಬ್ಬನೇ ಆತ್ಮನು ಇರುತ್ತಾನೆಂದೂ ಆ ಭೂತಗಳ ಉಪಾಧಿರಾಶಿಯಾದ ಶರೀರಾದಿಗಳ ಗುಂಪುಗಳು ಈ ಆತ್ಮನಲ್ಲಿಯೇ ಸಮುದ್ರದಲ್ಲಿ ತೆರೆಗಳಂತೆ ಕಲ್ಪಿತವಾಗಿರುವವೆಂತಲೂ ತಿಳಿಯುವದೇ ಪರಮಾರ್ಥವಾದ ಅರಿವು. ಅದರಿಂದಲೇ ಪರಮಪುರುಷಾರ್ಥವು ದೊರೆಯುವದು. ಏಕೆಂದರೆ ಈ ಲೋಕದಲ್ಲಿ ತಾನು, ಹೆರರು – ಎಂಬ ಭೇದಬುದ್ಧಿಯನ್ನು ಕಲ್ಪಿಸಿಕೊಂಡು ರಾಗದ್ವೇಷಗಳಿಂದ ಶೋಕಿಸುತ್ತಿರುವದೂ ಆ ಶೋಕಕ್ಕೆ ಕಾರಣವಾದ ಮೋಹವೂ ನಮ್ಮೆಲ್ಲರ ದುಃಖಕ್ಕೆ ಮೂಲವಾಗಿರುತ್ತದೆ. ಯಾವಾಗ ಸಮಸ್ತ ಭೂತಗಳ ಆತ್ಮನೂ ಒಬ್ಬನೇ, ಅವನಲ್ಲಿಯೇ ಎಲ್ಲವೂ ಕಲ್ಪಿತವಾಗಿರುವದು, ಆ ಒಬ್ಬನೇ ನನ್ನ ಆತ್ಮನು– ಎಂಬ ಅರಿವು ನಮ್ಮ ಚಿತ್ತಾಕಾಶದಲ್ಲಿ ಮೂಡುವದೋ ಆ ಕೂಡಲೆ ದ್ವಿತೀಯವಸ್ತುವನ್ನು ಕಲ್ಪಿಸುವ ಅಜ್ಞಾನದ ಕತ್ತಲೆಯು ತೊಲಗುವದರಿಂದ ಅಜ್ಞಾನದ ಕಾರ್ಯವಾದ ಶೋಕಮೋಹಗಳು ತಲೆದೋರಲಾರದೆ ಹೋಗುವವು. ಆಗಲೆ ನಾವು ಆನಂದದ ಗಟ್ಟಿಯಾದ ನಮ್ಮ ಸ್ವರೂಪವನ್ನು ಕಂಡುಕೊಂಡು ನಲಿದಾಡುವೆವು.

(ಮೂಲ)

ಸ ಪರ್ಯಗಾತ್ ಶುಕ್ರಮಕಾಯಮವ್ರಣಮ್
ಅಸ್ನಾವಿರಗ್ಂ ಶುದ್ಧಮಪಾಪವಿದ್ಧಮ್ ।
ಕವಿರ್ಮನೀಷೀ ಪರಿಭೂಃ ಸ್ವಯಂಭೂಃ
ಯಾಥಾತಥ್ಯತೋಽರ್ಥಾನ್ ವ್ಯದಧಾತ್
ಶಾಶ್ವತೀಭ್ಯಃ ಸಮಾಭ್ಯಃ ॥

''ಆತನು ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುವನು. ಹೊಳೆಯುತ್ತಿರುವನು. ಶರೀರವಿಲ್ಲದವನು ; ಗಾಯವಿಲ್ಲದವನು ; ನರಗಳಿಲ್ಲದವನು ; ಶುದ್ಧನು ; ಪಾಪದ ಸೋಂಕಿಲ್ಲದವನು ; ಕವಿಯು ; ಮನೀಷಿಯು ; ಎಲ್ಲರ ಮೇಲೂ ಇರುವಾತನು ; ಸ್ವಯಂಭುವುಸಂವತ್ಸರವೆಂಬ ಪ್ರಜಾಪತಿಗಳಿಗೆ ಅವರವರಿಗೆ ತಕ್ಕಂತೆ ಕೆಲಸಗಳನ್ನು ಹಂಚಿಕೊಟ್ಟಿರುವಾತನು.'

ಆತ್ಮನನ್ನು ಉಪಾಧಿಗಳ ಕಣ್ಣಿನಿಂದ ನೋಡದೆ ಅವನು ಇರುವಂತೆಯೇ ನೋಡಿದರೆ ಅವನ ಮೇಲ್ಮೆಯು ಎದ್ದುಕಾಣುತ್ತದೆ. ಉಪಾಧಿಗಳೆಂಬಿವು ನಿಜವಾಗಿ ಆತ್ಮನನ್ನು ಬಿಟ್ಟಿರುವದೇ ಇಲ್ಲ. ಆಕಾಶದೊಳಗಿರುವ ವಾಯುವೇ ಮುಂತಾದ ಭೂತಗಳು ಆಕಾಶವನ್ನು ಅಲ್ಲಿಗಲ್ಲಿಗೆ ಕಚ್ಚುಮಾಡಿರುವವೆಂದೂ ತಮ್ಮ ತಮ್ಮ ಧರ್ಮಗಳಿಂದ ಅದನ್ನು ಕಲಾಯಮಾಡಿರುವವೆಂದೂ ಮೂಢರು ಬಗೆಯ ಬಹುದು. ಆದರೆ ನಿಜವೇನು ? ಆಕಾಶವು ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುತ್ತದೆ. ಅದಕ್ಕೆ ವಾಯುವಿನ ಹೊಡೆತವಾಗಲಿ, ತೇಜಸ್ಸಿನ ಉರಿಯಾಗಲಿ, ಅಪ್ಪಿನ ಅಂಟಾ ಗಲಿ, ಪೃಥ್ವಿಯ ವಾಸನೆಯಾಗಲಿ ತಗಲುವಂತೆಯೇ ಇಲ್ಲ. ಇನ್ನೂ ಸರಿಯಾಗಿ ನೋಡಿದರೆ ಆಕಾಶವೇ ವಾಯು, ಅಪ್ಪು, ಪೃಥ್ವಿ– ಎಂಬ ವಿವಿಧವಾದ ಆಕಾರಗಳನ್ನು ತಳೆದಿರುವದರಿಂದ ಎಲ್ಲವೂ ಆಕಾಶವೇ ಆಗಿರುತ್ತದೆ. ಆದ್ದರಿಂದ ಅದರಲ್ಲಿ ಹತ್ತಿಕೊಂಡಿರುವ ಕಲ್ಮಷವೆಂಬುದೇ ಇಲ್ಲ ಅಲ್ಲವೆ ? ಇದರಂತೆ ಆತ್ಮನು ಆಕಾಶಾದಿಸಮಸ್ತಭೂತಗಳಿಗೂ ಕಾರಣನಾಗಿರುತ್ತಾನೆ. ಆಕಾಶಾದಿಪಂಚಭೂತ ಗಳಿಂದಾಗಿರುವ ಸ್ಥೂಲಸೂಕ್ಷ್ಮಶರೀರಗಳು ಕೂಡ ಅವನಲ್ಲಿಯೇ ಹಗ್ಗದಲ್ಲಿ ಹಾವಿನಂತೆ ಕಲ್ಪಿತವಾಗಿರುತ್ತವೆ. ಆದ್ದರಿಂದ ಆತ್ಮನನ್ನು ಬೇರ್ಪಡಿಸುವ ವಿಷಯಗಳಾಗಲಿ ಅವುಗಳಿಂದಾಗುವ ಮಾರ್ಪಾಡುಗಳ ಭೋಗವನ್ನು ಕೊಡುವ ಶರೀರ, ಇಂದ್ರಿಯ, ಮನಸ್ಸು – ಎಂಬ ಉಪಾಧಿಗಳಾಗಲಿ ನಿಜವಾಗಿ ಇರುವದೇ ಇಲ್ಲ.

ಇಂಥ ಆತ್ಮನಿಗೆ ಏತರ ಅಂಜಿಕೆ ? ಅವನನ್ನು ಗಾಯಗೊಳಿಸುವ ಶಸ್ತ್ರಾಸ್ತ್ರ ಗಳಿಲ್ಲ, ಸುಡುವ ಬೆಂಕಿಯಿಲ್ಲ, ತೋಯಿಸುವ ನೀರಿಲ್ಲ, ಒಣಗಿಸುವ ಗಾಳಿಯಿಲ್ಲ, ಧೂಳುಮಾಡುವ ಮಣ್ಣಿಲ್ಲ, ತನ್ನೊಳಗೆ ಅಡಕಮಾಡಬಲ್ಲ ಆಕಾಶವಿಲ್ಲ, ಅವನಿಗೆ ರಕ್ತಮಾಂಸಗಳಿಂದ ಕೂಡಿದ ಸ್ಥೂಲಶರೀರವಿಲ್ಲ, ಪ್ರಾಣೇಂದ್ರಿಯಮನಸ್ಸು ಗಳಿಂದಾಗಿರುವ ಸೂಕ್ಷ್ಮಶರೀರವಿಲ್ಲ. ಹೀಗಿರುವಲ್ಲಿ ಅವನಿಗೆ ಬೇಕುಬೇಡ ವೆಂದಾಗಬಹುದಾದ ವಿಷಯಗಳ ಅರಿವಾಗಲಿ, ಅವುಗಳಲ್ಲಿ ಇಚ್ಛಾದ್ವೇಷಗಳಾಗಲಿ

ಅವುಗಳನ್ನು ಪಡೆಯುವದಕ್ಕೆ ಅಥವಾ ದೂರವಿರಿಸುವದಕ್ಕೆ ಬೇಕಾದ ಪ್ರಯತ್ನವಾಗಲಿ ಧರ್ಮಾಧರ್ಮಗಳಾಗಲಿ, ಇವುಗಳಿಂದಾಗುವ ಸುಖದುಃಖಗಳನ್ನು ಅನುಭವಿಸುವದಾಗಲಿ ಹೇಗೆ ಉಂಟಾದಾವು ?

ಆತ್ಮನಿಗೆ ಸಪ್ತಧಾತುಮಯವಾದ ಸ್ಥೂಲಶರೀರವೂ ಸುಖದುಃಖಾದಿಗಳ ಅನುಭವವನ್ನುಂಟುಮಾಡುವ ಸೂಕ್ಷ್ಮಶರೀರವೂ ಇರುವಂತೆ ನಮಗೆ ತೋರುತ್ತಿರುವದೇನೋ ನಿಜ. ಆದರೆ ಕನಸಿನಲ್ಲಿಯೂ ಹಾಗೆಯೇ ತೋರುತ್ತಿರುವದಲ್ಲವೆ ? ನಮಗೆ ಸ್ಥೂಲಶರೀರವೂ ಸೂಕ್ಷ್ಮಶರೀರವೂ ಇರುವಂತೆಯೂ ನಾವು ಧರ್ಮಾಧರ್ಮಗಳ ಫಲವಾಗಿ ಸುಖದುಃಖಗಳನ್ನು ಅನುಭವಿಸುತ್ತಿರುವಂತೆಯೂ ತೋರುವದಲ್ಲ ? ಆ ಕನಸಿನಲ್ಲಿ ತೋರಿಹಾರುವ ಶರೀರಗಳನ್ನಾಗಲಿ, ಭೋಗಗಳನ್ನಾಗಲಿ ಸತ್ಯವೆಂದು ಭಾವಿಸುವೆವೆ ? ಇಲ್ಲ. ಹೀಗಿರುವಲ್ಲಿ ಎಚ್ಚರದಲ್ಲಿ ತೋರುವ ಸ್ಥೂಲಸೂಕ್ಷ್ಮಶರೀರಗಳು ಮಾತ್ರ ಸತ್ಯವೆಂದು ನಂಬುವದಕ್ಕೆ ಕಾರಣವೇನು ? ಇನ್ನೊಂದು ವಿಚಾರ. ತನಿನಿದ್ರೆಯಲ್ಲಿ ನಮಗೆ ಯಾವ ಶರೀರದ ಸಂಬಂಧದ ಸುಳಿವೂ ಕಾಣುವದಿಲ್ಲ. ಅಲ್ಲಿ ಯಾವ ವಿಷಯಪ್ರಪಂಚವೂ ಕಾಣಿಸುವದಿಲ್ಲ. ಆದರೂ ನಾವು ಮಿಕ್ಕ ಅವಸ್ಥೆಗಳಲ್ಲಿ ಇದ್ದಂತೆಯೇ ಅಲ್ಲಿಯೂ ನಮ್ಮ ಸ್ವರೂಪದಲ್ಲಿ ಒಂದಿಷ್ಟೂ ಮುಕ್ಕಾಗದೆ ಇರುವೆವಲ್ಲವೆ ? ಆದ್ದರಿಂದ ಏನು ಸಿದ್ಧವಾಯಿತು ? ನಾವು ಸ್ವಭಾವದಿಂದ ಅಶರೀರರೇ. ನಮ್ಮ ಆತ್ಮನಲ್ಲಿ ಯಾವ ಶರೀರಸಂಬಂಧವಾಗಲಿ ಸುಖದುಃಖಭೋಗವಾಗಲಿ – ಇರುವದೇ ಇಲ್ಲ.

ಇಲ್ಲಿ ಒಂದು ವಿಶೇಷವುಂಟು. ತನಿನಿದ್ರೆಯಲ್ಲಿ ನಮಗೆ ಯಾವದೊಂದು ಎರಡನೆಯ ವಸ್ತುವಿನ ಸಂಬಂಧವೂ ಇಲ್ಲದೇಇದ್ದರೂ ಆ ನಿದ್ರೆಯನ್ನು ಪಡೆದ ಮಾತ್ರದಿಂದ ನಾವು ಕೃತಕೃತ್ಯರಾಗುವ ಸಂಭವವೇನೂ ಇಲ್ಲ. ಏಕೆಂದರೆ ಹುಟ್ಟಿದ ಪ್ರಾಣಿಗಳೆಲ್ಲವೂ ದಿನದಿನವೂ ತನಿನಿದ್ರೆಯನ್ನು ಹೊಂದುತ್ತಿರುತ್ತವೆ. ಆದರೆ ನಿದ್ರೆಯು ಸವೆದಕೂಡಲೆ ಎಚ್ಚರದಲ್ಲಿ ಮತ್ತೆ ಅವುಗಳಿಗೆಲ್ಲ ಶರೀರಸಂಬಂಧವೂ ಸುಖದುಃಖಾನುಭವದ ಸಂಬಂಧವೂ ಸಿದ್ಧವಾಗಿರುತ್ತದೆ. ಆದ್ದರಿಂದ ಅದೆಲ್ಲವೂ ಕಾರಣರೂಪದಿಂದ ಇದ್ದೇಇರುವದೆಂದಾಗುತ್ತದೆ. ಆದರೆ ಅವಸ್ಥಾತ್ರಯಗಳನ್ನು ಶಾಸ್ತ್ರೀಯರೀತಿಯಿಂದ ಪರೀಕ್ಷಿಸಿ ನಿಜವನ್ನು ಅರಿತುಕೊಂಡಿರುವ ಮಹನೀಯರ ವಿಷಯವು ಹಾಗಲ್ಲ. ಅವರಿಗೆ ಕಾರಣಶರೀರದ ಸಂಬಂಧವೂ ಇರುವದೇಇಲ್ಲ. ಏಕೆಂದರೆ ಮಿಕ್ಕ ಜೀವರು ಎಚ್ಚರದಲ್ಲಿ ತಮಗೆ ತೋರುವ ಶರೀರವು ಗಾಢನಿದ್ರೆಯಲ್ಲಿಯೂ ಹೇಗೋ ಎಲ್ಲಿಯೋ ಅಡಗಿಕೊಂಡಿರುವದೆಂದು ಭಾವಿಸಿಕೊಂಡು ಶರೀರಬಂಧಕ್ಕೆ ಒಳಗಾಗುತ್ತಿರುತ್ತಾರೆ. ಜ್ಞಾನಿಗಳು ಹಾಗಲ್ಲ.

ತನಿನಿದ್ರೆಯಲ್ಲಿ ತಮಗೆ ಶರೀರವೇ ಮುಂತಾದ ಎರಡನೆಯ ವಸ್ತುವಿನ ಸಂಬಂಧವು ರವೆಯಷ್ಟೂ ಇಲ್ಲದಂತೆ ಹೇಗೆ ಅಳಿಸಿಹೋಗಿರುವದೋ ಹಾಗೆಯೆ ಎಚ್ಚರದಲ್ಲಿಯೂ ಹೋಗಿಯೇ ಇರುವದೆಂದೂ ಹಗ್ಗದಲ್ಲಿ ಹಾವನ್ನು ಕಾಣುವ ಮೂಢರಂತೆ ಜನರು ಆತ್ಮನಲ್ಲಿಲ್ಲದ ಶರೀರಾದಿಸಂಬಂಧವನ್ನು ಹುಟ್ಟುಗಟ್ಟಿಕೊಂಡಿರುವರೆಂದೂ ಅವರು ನಿಶ್ಚಯಿಸಿರುವರು. ಆದ್ದರಿಂದ ಅವರ ದೃಷ್ಟಿಯಲ್ಲಿ ನಮ್ಮ ಆತ್ಮಸ್ವರೂಪಕ್ಕೆ ಯಾವ ಶರೀರದ ಸಂಬಂಧವೂ ಇರುವದಿಲ್ಲ. ಯಾವ ಧರ್ಮಾಧರ್ಮಾದಿಗಳ ಸಂಬಂಧವೂ ಇಲ್ಲ. ಯಾವ ಸುಖದುಃಖಾದಿದ್ವಂದ್ವಗಳ ಹೊಡೆತವೂ ಇಲ್ಲ. ಆ ಸ್ವರೂಪವು ಚೈತನ್ಯವೆಂಬ ಪರಿಶುದ್ಧಪ್ರಕಾರದಿಂದಲೇ ಯಾವಾಗಲೂ ಥಳಗುಟ್ಟುತ್ತಿರುವದು.

ಮೇಲೆ ವರ್ಣಿಸಿರುವ ಪರಮಾತ್ಮನನ್ನೇ ಉಪಾಸಕರ ದೃಷ್ಟಿಯಿಂದ ಈಶ್ವರನೆಂದು ವೇದದಲ್ಲಿ ಕರೆದಿರುತ್ತದೆ. ಆ ದೃಷ್ಟಿಯಿಂದ ಆತ್ಮನು ಕವಿಯು ಎಂದರೆ ತನ್ನ ನಿತ್ಯಚೈತನ್ಯಶಕ್ತಿಯಿಂದ ಮಿಕ್ಕವರಿಗೆ ಎಟುಕದ ಭೂತಭವಿಷ್ಯದ್ ವರ್ತಮಾನಗಳೆಲ್ಲವನ್ನೂ ಅರಿಯಬಲ್ಲ ಸರ್ವಜ್ಞನು. ಅವನು ಮನೀಷಿಯು– ಎಂದರೆ ಮನಸ್ಸಿನ ಕಲ್ಮಷವನ್ನೂ ಚಾಂಚಲ್ಯವನ್ನೂ ತನ್ನಮೇಲೆ ಹಾಕಿಕೊಂಡು ಪೇಚಾಡುವವನಲ್ಲ. ಪ್ರಪಂಚದಲ್ಲಿನ ಇಡಿಯ ಮನಸ್ಸಿನ ರಾಶಿಯನ್ನೇ ಹಿಡಿತದಲ್ಲಿಟ್ಟುಕೊಂಡಿರುವಾತನು. ಈ ದೃಷ್ಟಿಯಿಂದಲೇ ಆತನನ್ನು ಅನಂತಕಲ್ಯಾಣ ಗುಣಾಕರನೆಂದು ಶಾಸ್ತ್ರಗಳು ಕೊಂಡಾಡುವವು. ಆತನು ಪರಿಭೂ ಎಂದರೆ ಎಲ್ಲರಿಗೂ ಮೇಲುಗೈಯಾಗಿರುವಾತನು. ಸರ್ವೇಶ್ವರನು. ಸರ್ವಾಧಿಪತಿಯು ; ದೇವೋತ್ತಮನು. ದೇವಾಧಿದೇವನು. ಇಷ್ಟೇ ಅಲ್ಲ, ಆತನು **ಸ್ವಯಂಭು.** ಎಲ್ಲವೂ ತಾನೇ ಆಗಿರುವಾತನು. ಚೇತನಾಚೇತನಗಳೆಲ್ಲವೂ ಆತನೇ ಎಂದರೆ ದೇವತೆಗಳೆಲ್ಲರೂ ಆತನ ವಿಭೂತಿಯೇ. ಮಿಕ್ಕದ್ದೆಲ್ಲವೂ ಆತನಿಂದ ಉಂಟಾಗಿರುತ್ತದೆ. ಆತನು ಮಾತ್ರ ಬೇರೆ ಇತರರಿಂದಲೂ ಆಗಿರದೆ ತಾನೇತಾನಾಗಿ ಅನಾದಿಯಾಗಿರುತ್ತಾನೆ. ಆತನು ನಿತ್ಯತೃಪ್ತನು. ಜಗತ್ತಿನ ಕಲ್ಯಾಣಕ್ಕಾಗಿ ಸೃಷ್ಟಿಯೇ ಮುಂತಾದ ಕಾರ್ಯಗಳಲ್ಲಿ ತೊಡಗಿರುವ ಪ್ರಜಾಪತಿಗಳೆನಿಸುವ ಬ್ರಹ್ಮರು ಕೂಡ ಆತನಿಂದ ನಿಯುಕ್ತರಾಗಿ ತಮ್ಮತಮ್ಮ ಕಾರ್ಯಗಳಲ್ಲಿ ನಿರತರಾಗಿರುತ್ತಾರೆ. ಇಂಥ ಮಹಾಮಹಿಮನವನು. ಆತನಿಂದಲೇ ಸಕಲ ಇಷ್ಟಾರ್ಥಗಳೂ ನೆರವೇರುವವು. ಆತನನ್ನು ಉಪಾಸನೆಮಾಡಿಯೇ ಉಪಾಸಕರು ಕ್ರಮಮುಕ್ತಿಯನ್ನು ಪಡೆಯುತ್ತಾರೆ.

ಹೀಗೆ ಮಿಗಿಲಿಲ್ಲದ ಇಂಥ ಸರ್ವಜ್ಞಸರ್ವಶಕ್ತನೇ ಈ ನಿತ್ಯಶುದ್ಧಬುದ್ಧ ಮುಕ್ತಸ್ವರೂಪನೇ ನಮ್ಮಗಳೆಲ್ಲರ ಆತ್ಮನು– ಎಂದು ತಿಳಿಸಿಕೊಡುವದೇ ಮಂತ್ರದ

ಉದ್ದೇಶವು. ಇಗೋ ಈ ಸ್ವರೂಪವನ್ನರಿತವರೇ ಲೋಭಮೋಹಗಳನ್ನು ದಾಟಿ ಕೃತಕೃತ್ಯರಾಗುವರು. ಇದನ್ನರಿಯದವರೇ ಅಸುರರ ಅಂಧಂತಮಸ್ಸಿನ ಲೋಕಗಳನ್ನು ಪಡೆದು ಸಂಕಟಪಡುತ್ತಿರುವರು. ಇದನ್ನರಿತ ವಿವೇಕಿಯು ಜ್ಞಾನಕ್ಕೆ ತಕ್ಕ ಯೋಗ್ಯತೆಯನ್ನೂ ತನ್ಮೂಲಕ ಜ್ಞಾನವನ್ನೂ ಸಂಪಾದಿಸಿಕೊಂಡು ಸುಖಿಯಾಗಬೇಕು– ಎಂಬುದೇ ಇಲ್ಲಿ ಮಹಾತಾತ್ಪರ್ಯವು.

(ಮೂಲ)

ಅಂಧಂ ತಮಃ ಪ್ರವಿಶನ್ತಿ ಯೇಽಸಂಭೂತಿಮುಪಾಸತೇ ।
ತತೋ ಭೂಯ ಇವ ತೇ ತಮೋ ಯ ಉ ಸಂಭೂತ್ಯಾಗ್ಂ ರತಾಃ ॥
ಅನ್ಯದೇವಾಹುಃ ಸಂಭವಾದನ್ಯದಾಹುರಸಂಭವಾತ್ ।
ಇತಿ ಶುಶ್ರುಮ ಧೀರಾಣಾಂ ಯೇನಸ್ತದ್ವಿಚಚಕ್ಷಿರೇ ॥
ಸಂಭೂತಿಂ ಚ ವಿನಾಶಂ ಚ ಯಸ್ತದ್ವೇದೋಭಯಗ್ಂ ಸಹ ।
ವಿನಾಶೇನ ಮೃತ್ಯುಂ ತೀರ್ತ್ವಾ ಸಂಭೂತ್ಯಾಮೃತಮಶ್ನುತೇ ॥

"ಯಾರು ಸಂಭೂತಿಯಲ್ಲದ್ದನ್ನು ಸೇವಿಸುವರೋ ಅವರು ಕಗ್ಗತ್ತಲೆಯನ್ನು ಹೊಗುವರು. ಸಂಭೂತಿಯಲ್ಲಿಯೇ ಯಾರು ನಿರತರಾಗುವರೋ ಅವರು ಇನ್ನೂ ಹೆಚ್ಚಿನ ಕಗ್ಗತ್ತಲೆಯನ್ನು ಹೊಗುವರು. ಸಂಭೂತಿಯ ಸೇವೆಯಿಂದಲೇ ಬೇರೆಯ ಫಲವಾಗುವದು. ಅಸಂಭೂತಿಯ ಅನುಷ್ಠಾನದಿಂದಲೇ ಬೇರೆಯ ಫಲವಾಗುವದು. ಹೀಗೆಂದು ತಿಳಿದವರು ನಮಗೆ ವಿವರಿಸಿ ಹೇಳಿರುತ್ತಾರೆ. ಸಂಭೂತಿಯನ್ನೂ ವಿನಾಶವನ್ನೂ ಯಾವನು ಸೇರಿಸಿ ಉಪಾಸನೆಮಾಡುವನೋ, ಅವನು ವಿನಾಶದಿಂದ ಮೃತ್ಯುವನ್ನು ದಾಟಿ ಸಂಭೂತಿಯಿಂದ ಅಮೃತವನ್ನು ಹೊಂದುತ್ತಾನೆ."

ಇದುವರೆಗಿನ ಮಂತ್ರಗಳಿಂದ ಪರಮಾರ್ಥವನ್ನು ಹೊಗಳಿ ಜ್ಞಾನದಿಂದ ಕಂಡುಕೊಳ್ಳಬೇಕಾಗಿರುವ ಪರಮಾರ್ಥಸ್ವರೂಪವನ್ನು ವಿವರಿಸಿದ್ದಾಯಿತು. ಈಗ ಇಲ್ಲಿ ಒಂದು ಆಕ್ಷೇಪವು ತಲೆದೋರುತ್ತದೆ. ಆತ್ಮತತ್ತ್ವವೊಂದೇ ನಿಜವಾಗಿ ಇರುವದಾದರೆ ಎರಡನೆಯದು ಯಾವದೂ ಇಲ್ಲವೆಂದೇ ಸಿದ್ಧವಾಗುವದರಿಂದ ವೇದದಲ್ಲಿ ಕರ್ಮಗಳನ್ನು ವಿಧಿಸಿರುವದೇತಕ್ಕೆ ? ಉಪನಿಷತ್ತುಗಳಲ್ಲಿ ಕೂಡ ಉಪಾಸನೆಯನ್ನು ವಿಧಿಸಿದೆಯಲ್ಲ, ಅದಾದರೂ ಏತಕ್ಕೆ ? ಅವು ನಿಷ್ಫಲವಾದರೆ ಅಂಥ ನಿರರ್ಥಕವಾದ ಕರ್ಮೋಪಾಸನೆಗಳನ್ನು ವಿಧಿಸಿ ಜನರನ್ನು ಬರಿಯ ಆಯಾಸದಲ್ಲಿ ಬಳಲಿಸುವ ವೇದವು ಪ್ರಮಾಣವೆಂದು ಹೇಗೆ ನಂಬುವದು? ಹಾಗಿಲ್ಲದೆ ಅವುಗಳು ನಿಜವಾಗಿ ಫಲಕಾರಿಯಾಗಿದ್ದರೆ ಅವುಗಳನ್ನು ಮಾಡುವದರಲ್ಲಿ ದೋಷವೇನು ? ಯಾವ ದೋಷವೂ ಇಲ್ಲದಿದ್ದರೆ ಆತ್ಮಜ್ಞಾನವಿಲ್ಲದವರೆಲ್ಲರೂ

ಅಸುರರೆಂದೂ ಅವರು ಆತ್ಮಹತ್ಯಾದೋಷದಿಂದ ಆನಂದಶೂನ್ಯವಾದ ಕಗ್ಗತ್ತಲೆಯಂತಿರುವ ದಟ್ಟವಾದ ಅಜ್ಞಾನದ ಜನ್ಮವನ್ನು ಪಡೆಯಬೇಕಾಗುವದೆಂದೂ ಈ ಉಪನಿಷತ್ತಿನ ಮೂರನೆಯ ಮಂತ್ರದಲ್ಲಿ ಬೆದರಿಸಿರುವದೇತಕ್ಕೆ ? ಆ ಬೆದರಿಕೆಯೇ ಸರಿಯಾದರೆ ಕರ್ಮವನ್ನು ಮಾಡುತ್ತಲೇ ಜೀವನವನ್ನೆಲ್ಲ ಕಳೆಯಬೇಕೆಂದೂ ಇಲ್ಲದಿದ್ದರೆ ಪಾಪಲೇಪನವಾಗುವದೆಂದೂ ಇದೇ ಉಪನಿತ್ತಿನ ಎರಡನೆಯ ಮಂತ್ರದಲ್ಲಿ ಹೇಳಿದ್ದಕ್ಕೆ ಗತಿಯೇನು ? ಇದೆಲ್ಲ ಒಂದಕ್ಕೊಂದು ವಿರುದ್ಧವಾಯಿತಲ್ಲವೆ ?

ಈ ಆಕ್ಷೇಪಗಳಿಗೆ ಮೇಲಿನ ಮೂರು ಮಂತ್ರಗಳಲ್ಲಿ ಪರಿಹಾರವನ್ನು ಕೊಟ್ಟಿರುತ್ತದೆ. ವೇದದಲ್ಲಿ ಕರ್ಮಗಳನ್ನು ವಿಧಿಸಿರುವದೂ ಉಪಾಸನೆಯನ್ನು ವಿಧಿಸಿರುವದೂ ನಿಜ. ಆ ವಿಧಿಯಂತೆ ಕರ್ಮವನ್ನು ಮಾಡಿದರೆ ಫಲವೂ ಉಂಟು. ಉಪಾಸನೆಯನ್ನು ಮಾಡಿದರೂ ಫಲವುಂಟು. ಹಾಗಾದರೆ ಆತ್ಮಜ್ಞಾನವಿಲ್ಲದವರನ್ನೆಲ್ಲ ಒಟ್ಟುಗೂಡಿಸಿ ನಿಂದಿಸಿದ್ದೇಕೆ ? ಎಂದರೆ ಅದನ್ನು ತಿಳಿಯಬೇಕಾದರೆ ನಾವು ಹಿಂದೆ ಹೇಳಿದ ಪರಮಾರ್ಥದೃಷ್ಟಿ, ವ್ಯವಹಾರದೃಷ್ಟಿ– ಎಂಬ ಎರಡು ದೃಷ್ಟಿಗಳನ್ನು ವಿಂಗಡಿಸಿ ತಿಳಿದುಕೊಳ್ಳುವದು ಅಗತ್ಯವಾಗುವದು. ಮೊಟ್ಟಮೊದಲು ವ್ಯವಹಾರದೃಷ್ಟಿಯಿಂದ ವಿಚಾರಮಾಡೋಣ. ಈ ದೃಷ್ಟಿಯಿಂದ ನೋಡಿದಾಗ ಜನರು ಶಾಸ್ತ್ರವನ್ನನುಸರಿಸಿ ನಡೆಯುವವರು, ತಮ್ಮ ಮನಬಂದಂತೆ ನಡೆಯುವವರು – ಎಂದು ಎರಡು ಪಂಗಡವಾಗಿರುತ್ತಾರೆ. ಆ ಎರಡು ಪಂಗಡದಲ್ಲಿ ಮನಬಂದಂತೆ ನಡೆಯುವವರೆನ್ನುವರು ತಮಗೆ ಪ್ರಿಯವಾಗಿ ಕಾಣುವದನ್ನು ಮಾಡುವದಕ್ಕೆ ಹವಣಿಸುತ್ತಾರೆ. ಅಪ್ರಿಯವಾಗಿ ಕಾಣುವದನ್ನು ಬಿಡುವದಕ್ಕೆ ಹೋಗುತ್ತಾರೆ. ಇದು ಸ್ವಾಭಾವಿಕವಾದ, ಯಾರೂ ಹೇಳಿಕೊಡದಿದ್ದರೂ ಎಲ್ಲರಿಗೂ ಸ್ವಭಾವದಿಂದಲೇ ಮೊದಮೊದಲು ತೋರುವ ದೃಷ್ಟಿ. ಈ ದೃಷ್ಟಿಯನ್ನವಲಂಬಿಸಿ ವ್ಯವಹಾರಕ್ಕೆ ನುಗ್ಗಿದರೆ ಒಂದು ಕಷ್ಟವು ಎದುರಾಗುವದು. ಏಕೆಂದರೆ ನಮಗೆ ಮೊದಲು ಪ್ರಿಯವೆಂದು ತೋರಿದ್ದು ಕೆಲವು ವೇಳೆಗಳಲ್ಲಿ ನಮಗೆ ಹಿತವಾಗಿರುವದಿಲ್ಲವೆಂದು ಅದರ ಫಲದಿಂದ ತಿಳಿದುಬರುತ್ತದೆ. ಅದರಂತೆ ಅಪ್ರಿಯವೆಂದು ತೋರಿದ ಕರ್ಮವು ಹಿತವಾಗಿತ್ತೆಂದೂ ಅದರ ಪರಿಣಾಮದಿಂದ ತಿಳಿಯಬರುತ್ತದೆ. ಆದ್ದರಿಂದ ವಿವೇಕಿಯಾದವನು ನನಗೆ ಹಿತವು ಯಾವದು ? ಅಹಿತವು ಯಾವದು ? ಎಂಬಿದನ್ನು ಕೆಲಸಮಾಡುವದಕ್ಕೆ ಮೊದಲೇ ತಿಳಿದುಕೊಳ್ಳಬೇಕೆಂದು ಹಂಬಲಿಸುತ್ತಾನೆ. ಅಂಥವನಿಗೆ ಶಾಸ್ತ್ರವು 'ಇದು ಹಿತವು ; ಈ ಕರ್ಮವನ್ನು ಮಾಡು ; ಇದು ಅಹಿತವು, ಈ ಕರ್ಮವನ್ನು ಬಿಡು' ಎಂದು ವಿಧಿನಿಷೇಧಗಳಿಂದ ಕಾರ್ಯವನ್ನೂ

ಅಕಾರ್ಯವನ್ನೂ ವಿಂಗಡಿಸಿ ತಿಳಿಸುತ್ತದೆ. ಇದೀಗ ಕರ್ಮಕಾಂಡದಲ್ಲಿ ವಿಧಿಸಿರುವ ಕರ್ಮಗಳ ಪ್ರಯೋಜನವು.

ಹೀಗೆ ಯಾವ ಕರ್ಮವನ್ನು ಮಾಡಿದರೆ ಇಹದಲ್ಲಿಯೂ ಪರದಲ್ಲಿಯೂ ಒಳ್ಳೆಯದೇ ಆಗುವದೋ ಅದನ್ನು ಶಾಸ್ತ್ರದಿಂದಲೇ ತಿಳಿಯಬೇಕಾಯಿತಷ್ಟೆ. ಶಾಸ್ತ್ರದ ಕಟ್ಟಳೆಯನ್ನು ಪಾಲಿಸಿದ ಮಾತ್ರದಿಂದಲೇ ಒಂದು ಬಗೆಯ ಮೃತ್ಯುವನ್ನು ದಾಟಿದಂತೆ ಆಗುವದೆಂದು ಇದರಿಂದ ಸಿದ್ಧವಾಗುತ್ತದೆ. ಏಕೆಂದರೆ ಶಾಸ್ತ್ರೀಯ ಕರ್ಮವು ತನಗೆ ತೋರಿದಂತೆ ಮಾಡಿದರೆ ಆಗುವ ಕೆಟ್ಟಫಲವನ್ನು ತಪ್ಪಿಸಿ ಅದಕ್ಕಿಂತ ಉತ್ತಮವಾದ ಫಲವೇ ದೊರಕುವಂತೆ ಮಾಡುತ್ತದೆ. ಆದರೆ ಕರ್ಮದ ಫಲವು ಬಹುಕಾಲ ನಿಲ್ಲುವದಲ್ಲ. ಅದು ಕೆಲವು ಕಾಲ ಸುಖವನ್ನು ಕೊಟ್ಟು ತನ್ನ ಜೋರು ಮುಗಿಯುತ್ತಲೂ ಮತ್ತೆ ಭೂಮಿಯಲ್ಲಿ ಹುಟ್ಟಿ ಎಂದಿನಂತೆ ಕರ್ಮದಲ್ಲಿ ತೊಡಗುವಂತೆಯೇ ಮಾಡುತ್ತದೆ. ಆದ್ದರಿಂದ ಕರ್ಮವನ್ನು ಈ ಮಂತ್ರದಲ್ಲಿ 'ವಿನಾಶ' ಎಂದರೆ ಬೇಗನೆ ನಾಶವಾಗುವ ಫಲವನ್ನು ಕೊಡುವ ಸಾಧನ – ಎಂದು ಕರೆದಿರುತ್ತದೆ. ಅಂತೂ ನಮ್ಮ ದೃಷ್ಟಿಯಿಂದ ಕರ್ಮವು ಹೆಚ್ಚಿನದೇ ಆದರೂ ಶಾಸ್ತ್ರವು ಅದಕ್ಕಿಂತಲೂ ಹೆಚ್ಚಿನದಾದ ಉಪಾಸನೆಯನ್ನು ಹೇಳುವದಕ್ಕಾಗಿ ಅದನ್ನು ನಿಂದಿಸುತ್ತದೆ. ಆದ್ದರಿಂದಲೇ ಕರ್ಮವನ್ನು ಮಾಡುವವರು ಕಗ್ಗತ್ತಲೆಯ ಲೋಕವನ್ನು ಹೊಗುವರು – ಎಂದಿ ಇಲ್ಲಿ ಹೇಳಿದೆ.

ಇಲ್ಲಿ ಮತ್ತೊಂದು ರಹಸ್ಯವುಂಟು. ಉಪಾಸನೆಯೆಂಬುದು ಬಲುದೊಡ್ಡದೇ ಸರಿ. ಆದರೆ ಅದು ಎಲ್ಲರಿಗೂ ದಕ್ಕತಕ್ಕದ್ದಲ್ಲ. ಯಾರು ಕರ್ಮದಿಂದಾಗುವ ಫಲವನ್ನು ಪಡೆದುಕೊಂಡು ಉಪಾಸನೆಮಾಡುವದಕ್ಕೆ ತಕ್ಕ ಯೋಗ್ಯತೆಯನ್ನು ಸಂಪಾದಿಸಿಕೊಳ್ಳುವರೋ ಅವರೇ ಉಪಾಸನೆಯ ಹೆಚ್ಚಿನ ಫಲವನ್ನು ಪಡೆಯುವವರು. ದೇಹಪ್ರಧಾನವಾಗಿ ಮಾಡುವ ಕರ್ಮವನ್ನೇ ಮಾಡಲಾರದವನು ಬರಿಯ ಮನಃಪ್ರಧಾನವಾದ ಉಪಾಸನೆಯನ್ನು ಹೇಗೆ ಮಾಡಿಯಾನು ? ನಿಂತ ನೀರಿನ ಹೊಂಡದಲ್ಲಿ ಸಾಮಾನ್ಯವಾಗಿ ಈಜಲಾರದವನು ಹರಿಯುವ ನದಿಯಲ್ಲಿ ಅಂಗತ್ತಲಾಗಿ ಈಜಲಾಪನೆ ? ಎಂದಿಗೂ ಇಲ್ಲ. ಇಷ್ಟೇ ಅಲ್ಲ. ಬಾಹ್ಯಾಂಗವಾದ ಕರ್ಮವನ್ನು ಅನುಷ್ಠಾನಮಾಡದೆಯೇ ಅಂತರಂಗವಾದ ಉಪಾಸನೆಗೆ ಕೈಯಿಕ್ಕುವವನು ಕರ್ಮದ ಫಲವೂ ಇಲ್ಲದೆ ಉಪಾಸನೆಯ ಫಲವೂ ಇಲ್ಲದೆ ದಿಕ್ಕಿಲ್ಲದವನಾಗುವನು. ಹಿಂದಿನ ಮೋಡದ ರಾಶಿಯನ್ನು ಬಿಟ್ಟು ಮುಂದಿನ ರಾಶಿಯನ್ನು ಸೇರಿಕೊಳ್ಳದೆ ಇರುವ ಮೋಡದಂತೆ ಅವನು ಉಭಯ ಭ್ರಷ್ಟನಾಗಿ ಹೋಗುತ್ತಾನೆ. ಆದ್ದರಿಂದಲೇ ಮಂತ್ರದಲ್ಲಿ ಬರಿಯ ಸಂಭೂತಿಯನ್ನೇ ಉಪಾಸನೆ

ಮಾಡುವವರು ಕರ್ಮವನ್ನು ಮಾಡುವವರಿಗಿಂತಲೂ ಹೆಚ್ಚಿನ ಅಂಧಂತಮಸ್ಸನ್ನು ಪಡೆಯುವರೆಂದು ಹೇಳಿರುತ್ತದೆ.

ಮೊದಲೇ ತಿಳಿಸಿರುವಂತೆ ಕರ್ಮವನ್ನು ಸರಿಯಾಗಿ ಮಾಡಿದರೂ ಫಲವು ಉಂಟು. ಪಿತೃಲೋಕವೇ ಮುಂತಾದವು ಕರ್ಮಕ್ಕೆ ಫಲವೆಂದು ಶಾಸ್ತ್ರದಲ್ಲಿ ಹೇಳಿದೆ. ಹಾಗೆಯೇ ದೇವತೆಯನ್ನು ಉಪಾಸನೆಮಾಡುವವರಿಗೂ ಫಲವುಂಟು. ಯಾವ ದೇವತೆಯನ್ನು ಉಪಾಸನೆಮಾಡುತ್ತಾರೋ ದೇಹವನ್ನು ಬಿಟ್ಟಮೇಲೆ ಆಯಾ ದೇವತೆಯ ಲೋಕವನ್ನೇ ಪಡೆದು ಆಯಾ ದೇವತೆಗೆ ಸಮಾನವಾದ ಭೋಗಗಳನ್ನೇ ಪಡೆಯುವರೆಂದು ಶಾಸ್ತ್ರಗಳಲ್ಲಿ ಹೇಳಿದೆ. ಆದ್ದರಿಂದ ಇಲ್ಲಿ ಕರ್ಮಗಳನ್ನೂ ಉಪಾಸನೆಗಳನ್ನೂ ನಿಂದಿಸಿರುವದು ಅವುಗಳನ್ನು ದೂಷಿಸುವದಕ್ಕಲ್ಲ. ಅವುಗಳಿಂದ ಉಂಟಾಗುವ ಅಲ್ಪಫಲಕ್ಕಿಂತಲೂ ಹೆಚ್ಚಿನ ಫಲವನ್ನು ಕೊಡುವ ಮತ್ತೊಂದು ಉತ್ತಮವಾದ ಅನುಷ್ಠಾನವನ್ನು ತಿಳಿಸಿಕೊಡವದಕ್ಕೆ. ಕರ್ಮ, ಉಪಾಸನೆ – ಈ ಎರಡನ್ನೂ ಒಟ್ಟುಗೂಡಿಸಿ ಅನುಷ್ಠಾನಮಾಡಬೇಕೆಂದು ತಿಳಿಸುವದೇ ಈ ನಿಂದೆಗೆ ಉದ್ದೇಶವು.

ಕರ್ಮವನ್ನು ಒಂಟಿಯಾಗಿಯೇ ಮಾಡಿದರೆ ಯಾವ ಕರ್ಮಕ್ಕೆ ಯಾವ ಫಲವನ್ನು ಹೇಳಿದೆಯೋ ಆಯಾ ಫಲವಾಗುತ್ತದೆ. ಆದರೆ ಅದನ್ನು ಉಪಾಸನೆಯೊಡನೆ ಸೇರಿಸಿ ಮಾಡುವಾಗ ಆಯಾ ಫಲವು ಕ್ಷುದ್ರವೆಂಬ ತಿಳಿವಳಿಕೆಯೂ ಬಂದು ಮನಸ್ಸು ಮೇಲಿನ ಮಟ್ಟಕ್ಕೇರುವದೆಂಬ ಹೆಚ್ಚಿನ ಫಲವನ್ನು ಕೊಡುತ್ತದೆ. ಆಗಲೇ ಉಪಾಸನೆಗೆ ತಕ್ಕ ಯೋಗ್ಯತೆಯನ್ನು ಸಾಧಕನು ಹೊಂದುವನು. ಆಗ ಅವನಿಗೆ ಸಣ್ಣ ಪುಟ್ಟ ಉಪಾಸನೆಗಳನ್ನು ಮಾಡಿ ತತ್ಕಾಲದ ಫಲವನ್ನು ಪಡೆಯುವದಕ್ಕಿಂತಲೂ ಸಾಕ್ಷಾತ್ ಪರಮೇಶ್ವರನನ್ನೇ ಉಪಾಸನೆಮಾಡಿ ಶಾಶ್ವತವಾದ ಅವನ ಸ್ಥಾನವನ್ನೇ ಪಡೆಯುವದು ಮೇಲೆಂದು ತೋರುತ್ತದೆ. ಅವನು ಅದರಂತೆ ಆಚರಿಸಿ ಬ್ರಹ್ಮಲೋಕವನ್ನೇ ಹೊಂದಿ ಶಾಶ್ವತಾನಂದವನ್ನು ಗಳಿಸಿಕೊಳ್ಳುತ್ತಾನೆ.

ಇಲ್ಲಿಯವರೆಗೆ ವ್ಯಾವಹಾರಿಕದೃಷ್ಟಿಯಿಂದ ಮಾಡಬಹುದಾದ ವಿಚಾರವನ್ನು ನಡೆಯಿಸಿದ್ದಾಯಿತು. ಕರ್ಮದಿಂದ ಸ್ವೇಚ್ಛಾಚಾರದ ದುಷ್ಪರಿಣಾಮವೆಂಬ ಮೃತ್ಯುವನ್ನು ದಾಟಬಹುದಾದರೂ ಕರ್ಮೋಪಾಸನೆಗಳ ಸಮುಚ್ಚಯದಿಂದ ಕರ್ಮದ ಕ್ಷುದ್ರಫಲವೆಂಬ ಮೃತ್ಯುವನ್ನೂ ದಾಟಬಹುದಾಗಿದೆ. ಆದರೆ ಕೆಲವು ಉಪಾಸನೆಗಳಿಂದ ಕರ್ಮಕ್ಕಿಂತಲೂ ಹೆಚ್ಚಿನ ಫಲವು ಬರಬಹುದಾದರೂ ಕರ್ಮೋಪಾಸನೆಗಳ ಸಮುಚ್ಚಯದಿಂದ ಶಾಶ್ವತವಾದ ಬ್ರಹ್ಮಲೋಕವನ್ನೇ ಪಡೆದು

ಸುಖಿಸಬಹುದು – ಎಂಬಿದನ್ನು ತಿಳಿಸಿಕೊಡುವದಕ್ಕಾಗಿಯೇ ಬೇರೆಬೇರೆಯಾಗಿ ಕರ್ಮವನ್ನೂ ಉಪಾಸನೆಯನ್ನೂ ಹಳಿದಿರುತ್ತದೆಯೆಂದು ಈ ವಿಚಾರದಿಂದ ಸಿದ್ಧವಾಯಿತು. ಆದ್ದರಿಂದ ಶಾಸ್ತ್ರವು ನಿರರ್ಥಕವಾದ ಕರ್ಮೋಪಾಸನೆಗಳನ್ನು ವಿಧಿಸಿತೆಂಬ ಆಕ್ಷೇಪವು ಹೊಂದುವದಿಲ್ಲ. ತಾನೇ ಅವುಗಳನ್ನು ವಿಧಿಸಿ ತಾನೇ ಅವುಗಳನ್ನು ಜರಿದದ್ದು ಹೇಗೆ ? ಎಂಬ ಆಕ್ಷೇಪವೂ ಬರಲಾರದು. ಇನ್ನು ಕರ್ಮೋಪಾಸಕರನ್ನು ಒಟ್ಟುಗೂಡಿಸಿ ಅವರುಕೂಡ ಅಸುರರು – ಎಂದು ಹಳಿದಿರುವದರ ರಹಸ್ಯವೇನೆಂಬುದನ್ನು ವಿಚಾರಮಾಡೋಣ.

(ಮೂಲ)

ಅಂಧಂತಮಃ ಪ್ರವಿಶನ್ತಿ ಯೇಽವಿದ್ಯಾಮುಪಾಸತೇ।
ತತೋ ಭೂಯ ಇವ ತೇ ತಮೋ ಯ ಉ ವಿದ್ಯಾಯಾಗ್ಂ ರತಾಃ॥
ಅನ್ಯದೇವಾಹುರ್ವಿದ್ಯಯಾ ಅನ್ಯದಾಹುರವಿದ್ಯಯಾಃ।
ಇತಿ ಶುಶ್ರುಮ ಧೀರಾಣಾಂ ಯೇನಸ್ತದ್ವಿಚಚಕ್ಷಿರೇ॥
ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಗ್ಂ ಸಹ।
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಮೃತಮಶ್ನುತೇ॥

''ಯಾರು ಅವಿದ್ಯೆಯನ್ನು ಸೇವಿಸುವರೋ ಅವರು ಕಗ್ಗತ್ತಲೆಯನ್ನು ಹೊಗುವರು. ಯಾರು ವಿದ್ಯೆಯಲ್ಲಿಯೇ ರತರಾಗಿರುವರೋ ಅವರು ಮತ್ತಷ್ಟು ಕಗ್ಗತ್ತಲೆಯನ್ನು ಹೊಗುವರು. ವಿದ್ಯೆಯಿಂದ ಬೇರೆಯ ಫಲವೇ ಆಗುವದೆಂದು ಹೇಳುವರು. ಅವಿದ್ಯೆಯಿಂದ ಬೇರೆಯ ಫಲವೇ ಆಗುವದೆಂದು ಹೇಳುವರು. ಹೀಗೆಂದು ತಿಳಿದವರು ನಮಗೆ ವಿವರಿಸಿಹೇಳಿದ್ದನ್ನು ಕೇಳಿದ್ದೇವೆ. ವಿದ್ಯೆಯನ್ನೂ ಅವಿದ್ಯೆಯನ್ನೂ ಯಾವಾತನು ಸೇರಿಸಿ ಅನುಷ್ಠಾನಮಾಡುವನೋ ಅವನು ಅವಿದ್ಯೆಯಿಂದ ಮೃತ್ಯುವನ್ನು ದಾಟಿ ವಿದ್ಯೆಯಿಂದ ಅಮೃತವನ್ನು ಹೊಂದುತ್ತಾನೆ.''

ಹಿಂದಿನ ಮೂರು ಮಂತ್ರಗಳ ವಿವರಣೆಯಲ್ಲಿ ವ್ಯವಹಾರದೃಷ್ಟಿಯಿಂದ ಕರ್ಮೋಪಾಸನೆಗಳ ವಿಚಾರವನ್ನು ಮಾಡಿದ್ದಾಯಿತು. ಕರ್ಮವನ್ನೂ ಉಪಾಸನೆಯನ್ನೂ ಬೇರೆಬೇರೆಯಾಗಿ ಮಾಡುವದರಿಂದ ಒಳ್ಳೊಳ್ಳೆಯ ಫಲಗಳೇ ಆಗುವಂತಿದ್ದರೂ ಅವುಗಳನ್ನು ಒಟ್ಟುಗೂಡಿಸಿ ಅನುಷ್ಠಾನಮಾಡಿದರೆ ಎಲ್ಲಕ್ಕೂ ಹೆಚ್ಚಿನ ಫಲವು ಕೈಸೇರುವದೆಂದು ತಿಳಿಸಿಕೊಟ್ಟದ್ದಾಯಿತು. ಕರ್ಮೋಪಾಸನೆಗಳ ಸಮುಚ್ಚಯದಿಂದ ಬ್ರಹ್ಮಲೋಕವೇ ದೊರಕುವದರಿಂದ ಅದನ್ನೇ ಮಾಡಬೇಕೆಂದು ವ್ಯವಹಾರದೃಷ್ಟಿಯಿಂದ ಹೇಳಿದ್ದಾಯಿತು.

ಆದರೆ ವ್ಯವಹಾರದೃಷ್ಟಿಯು ಎಷ್ಟೇ ಉತ್ತಮವಾದ ಫಲವನ್ನು ಕೊಡಲಿ– ಅದರಲ್ಲಿ ಒಂದು ದೋಷವಿದೆ. ಅದೇನೆಂದರೆ : ಆ ದೃಷ್ಟಿಯು ನಿಜವಾಗಿಯೂ ನಿಜವಾದ ಇರವನ್ನು ಅವಲಂಬಿಸಿದ್ದಲ್ಲ. ಕನಸಿನಲ್ಲಿ ಎಂಥ ಉತ್ತಮ ಭೋಗವನ್ನು ಪಡೆದರೆತಾನೆ ಕನಸು ಕನಸಲ್ಲದೆ ಹೋಗುವದೆ ? ಇಲ್ಲ. ಅದರಂತೆ ಕ್ರಿಯಾಕಾರಕ ಫಲವೆಂಬಿವು ಸತ್ಯವೆಂಬ ದೃಷ್ಟಿಯಿಂದ ಮಾಡುವ ಕರ್ಮೋಪಾಸನೆಗಳು ಎಷ್ಟೇ ಉತ್ತಮಫಲಭೋಗಗಳನ್ನು ಕೊಟ್ಟರೂ ಅದೆಲ್ಲವೂ ಅವಿದ್ಯೆಯ ಕ್ಷೇತ್ರಕ್ಕೇ ಸೇರಿರುತ್ತದೆ. ಅತ್ಯಂತಸಾತ್ತ್ವಿಕಫಲವನ್ನು ನೀಡುವ ಬ್ರಹ್ಮಲೋಕವು ಕೂಡ ಪರಮಾರ್ಥದೃಷ್ಟಿಯಿಂದ ನೋಡಿದಾಗ ಕನಸಿನಲ್ಲಿ ಕಂಡ ಲೋಕದಂತೆಯೇ ಪೊಳ್ಳಾಗಿರುವದು. ಆದ್ದರಿಂದಲೇ ಭಗವಂತನು ಅರ್ಜುನನಿಗೆ ಉಪದೇಶ ಮಾಡಿದಾಗ–

ಆ ಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ ।
ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ ॥

ಎಂದಿರುತ್ತಾನೆ. ಒಳ್ಳೆಯ ಕರ್ಮಗಳಿಂದಾಗುವ ಮೇಲಿನ ಲೋಕಗಳಲ್ಲೆಲ್ಲ ಬ್ರಹ್ಮಲೋಕವೇ ಹೆಚ್ಚಿನದು. ಆದರೆ ಆ ಲೋಕಗಳಲ್ಲೆಲ್ಲ ಮಿಗಿಲಾದ ಬ್ರಹ್ಮಲೋಕ ದಲ್ಲಿ ಕೂಡ ಒಂದಾನೊಂದು ದೋಷವಿದೆ. ಅದೇನೆಂದರೆ : ಅವುಗಳಲ್ಲೆಲ್ಲ ಇದು ಸಾಧ್ಯ, ಇದು ಸಾಧನ – ಎಂಬ ದೃಷ್ಟಿಯು ಪ್ರಬಲವಾಗಿರುತ್ತದೆ. ಆದರೆ ಯಾವದು ಸಾಧನದಿಂದ ದೊರಕುವ ಫಲವೋ ಅದು ಸಾಧನದ ಜೋರಿಗೆ ತಕ್ಕಷ್ಟು ಕಾಲವಿದ್ದು ನಾಶವಾದೀತೇ ಹೊರತು ಶಾಶ್ವತವಾಗಿರಲಾರದು. ಬ್ರಹ್ಮ ಲೋಕದಲ್ಲಾಗುವ ಉತ್ತಮಫಲಭೋಗವು ಕೂಡ ಈ ನಿಯಮಕ್ಕೆ ಹೊರತಾಗಿಲ್ಲ. ಆ ಲೋಕದಲ್ಲಿರುವವರು ಬ್ರಹ್ಮಕಲ್ಪವು ಮುಗಿಯುವವರೆಗೂ ಉತ್ತಮವಾದ ಭೋಗಗಳನ್ನು ಅನುಭವಿಸಿ ಮತ್ತೊಂದು ಕಲ್ಪದ ಆರಂಭದಲ್ಲಿ ಮರಳಿ ಈ ಸಂಸಾರದ ಸುಳಿಗೆ ಸಿಕ್ಕಿಕೊಂಡು ನರಳಬೇಕಾಗುವದು. ಆದ್ದರಿಂದ ಕರ್ಮವಾಗಲಿ, ಉಪಾಸನೆಯಾಗಲಿ, ಕರ್ಮೋಪಾಸನೆಗಳ ಸಮುಚ್ಚಯವಾಗಲಿ ಕೊಡುವ ಫಲವೆಲ್ಲ ಅವಿದ್ಯೆಯೇ. ಈ ಅವಿದ್ಯೆಯನ್ನು ಸೇವಿಸುವವರು ತಮ್ಮ ಅನುಷ್ಠಾನಕ್ಕೆ ತಕ್ಕ ಕ್ರಿಯಾಕಾರಕಫಲಗಳೆಂಬ ಕಗ್ಗತ್ತಲೆಯಲ್ಲಿಯೇ ತಟ್ಟಾಡುತ್ತಿರುವರು – ಎಂದು ಮಂತ್ರವು ಅವರನ್ನು ನಿಂದಿಸಿರುತ್ತದೆ.

ಈಗ ಇನ್ನೊಂದು ವಿಷಯವನ್ನು ಹೇಳಬೇಕಾಗಿದೆ. ಕರ್ಮವೂ ಉಪಾಸನೆಯೂ ಅವಿದ್ಯಾಭೂಮಿಕೆಯಲ್ಲಿರುವವೆಂಬುದು ನಿಜವೇ. ಆದರೆ ಅವುಗಳನ್ನು ಕೈಬಿಟ್ಟಮಾತ್ರದಿದ ನಮಗೆ ಉತ್ತಮಫಲವೇನೂ ದಕ್ಕಲಾರದು.

ಎಷ್ಟೋ ಜನರು ನಮಗೆ ಜ್ಞಾನದಿಂದ ಮುಕ್ತಿಯಗುವದೇ ಹೊರತು ಕರ್ಮೋಪಾಸನೆಗಳಿಂದ ಅದು ಎಂದಿಗೂ ದೊರಕದು– ಎಂಬ ಶಾಸ್ತ್ರೋಕ್ತಿಯ ಮರ್ಮವನ್ನು ತಿಳಿದುಕೊಳ್ಳದೆ ಸ್ವತಂತ್ರವಾಗಿ ವಿಚಾರಮಾಡುವದಕ್ಕೆ ತೊಡಗುತ್ತಾರೆ. ಆ ವಿಚಾರದಿಂದ ದೊರೆತ ಜ್ಞಾನಾಭ್ಯಾಸವನ್ನೇ ಪರಮಾರ್ಥಜ್ಞಾನವೆಂದೂ ಭಾವಿಸುತ್ತಾರೆ. ಅಂಥವರಿಗೆ ಮುಕ್ತಿಯು ದೊರಕುವದು ಹಾಗಿರಲಿ, ಕರ್ಮಿಗಳಿಗೂ ಉಪಾಸಕರಿಗೂ ದೊರೆಯುವ ಫಲಗಳೂ ಅತ್ಯಂತ ದೂರವಾಗಿರುವವು. ಅವರ ಮನಸ್ಸಿನಲ್ಲಿ ಕರ್ತೃತ್ವಭೋಕ್ತೃತ್ವವಾಸನೆಗಳು ಮನೆಮಾಡಿಕೊಂಡೇ ಇರುವದರಿಂದ ಅವರಿಗೆ ಶಾಸ್ತ್ರೋಕ್ತವಾದ ಕರ್ಮೋಪಾಸನೆಗಳನ್ನು ತ್ಯಜಿಸಿ ತಾವು ಜ್ಞಾನಿಗಳೆಂದು ನಟಿಸಿದ್ದರ ಫಲವಾಗಿ ಮತ್ತಷ್ಟು ದಟ್ಟವಾದ ಕಗ್ಗತ್ತಲೆಯಂತಿರುವ ಅಧೋಗತಿಗಳುಂಟಾಗುವವು. ಆದ್ದರಿಂದ ಬರಿಯ ವಿದ್ಯೆಯಿಂದಲೇ ತಮಗೆ ಪರಮಪುರುಷಾರ್ಥವು ದೊರಕುವದೆಂಬ ಹಿರಿಯಾಸೆಯಿಂದ ಯಾರು ಕರ್ಮೋಪಾಸನೆಗಳನ್ನು ಕೈಬಿಡುವರೋ ಅವರೂ ಅವಿದ್ಯಾಕ್ಷೇತ್ರದಲ್ಲಿಯೇ ಇರುವರಾದ್ದರಿಂದ ಅವರು ಅರಿಶಿನದ ಕೂಳನ್ನು ನೆಚ್ಚಿ ವರುಷದ ಕೂಳನ್ನು ಬಿಟ್ಟ ಮೂರ್ಖರಿಗೆ ಸಮನಾಗುತ್ತಾರೆ – ಎಂದು ಬಲ್ಲವರು ತಿಳಿಸುತ್ತಾರೆ.

ಹಾಗಾದರೆ ನಾವು ಏನು ಮಾಡಬೇಕು ? ಎಂದರೆ ಅವಿದ್ಯೆಯನ್ನೂ ವಿದ್ಯೆಯನ್ನೂ ಒಟ್ಟುಗೂಡಿಸುವದಕ್ಕೆ ಪ್ರಯತ್ನಮಾಡಬೇಕು. ಅವಿದ್ಯೆಯಿಂದರೆ ಕರ್ಮೋಪಾಸನೆಗಳ ಸಮುಚ್ಚಯ. ಅದನ್ನು ಅನುಷ್ಠಾನಮಾಡುತ್ತಿದ್ದರೆ ಮನುಷ್ಯರಿಗೆ ಅಮೃತಫಲವೇ ಆಗುವದೆಂದು ಶಾಸ್ತ್ರದಲ್ಲಿ ಹೇಳಿದ್ದರೂ ಸಾಧನದಿಂದ ದೊರಕುವ ಫಲವು ಅಮೃತವಾಗಲಾರದು, ಅದು ಶಾಶ್ವತವಾಗಿರಲಾರದು –ಎಂದು ಮನಸ್ಸಿನಲ್ಲಿ ಚಿಂತಿಸುತ್ತಿರಬೇಕು. ಬ್ರಹ್ಮಲೋಕಕ್ಕೆ ಹೋದವರು ಅಮೃತತ್ವವನ್ನು ಪಡೆಯುತ್ತಾರೆ – ಎಂದು ಹೇಳುವದುಂಟು. ಆದರೆ ಅದು ನಿಜವಾದ ಅಮೃತತ್ವವಲ್ಲ. 'ಆಭೂತಸಂಪ್ಲವಂ ಸ್ಥಾನಮಮೃತತ್ವಂ ಹಿ ಭಾಷ್ಯತೇ' ಎಂಬ ಪುರಾಣವಾಕ್ಯದಂತೆ ಅದು ಪ್ರಲಯವಾಗುವವರೆಗೂ ಇರುವ ಸ್ಥಾನವಾದ್ದರಿಂದ ಅದನ್ನು ಅಮೃತವೆಂದು ಕರೆಯುವರು. ಇಷ್ಟೇ ಅಲ್ಲ, ಬ್ರಹ್ಮಲೋಕದಲ್ಲಿ ಯಾರು ಯಾರಿಗೆ ನಿಜವಾದ ಜ್ಞಾನವುಂಟಾಗುವದೋ ಅವರು ಪರಮಾರ್ಥವಾದ ಅಮೃತತ್ವವನ್ನೂ ಪಡೆಯುವರು. ಆ ಲೋಕದಲ್ಲಿರುವವರಿಗೆ ಇಂಥ ಪರಮಾರ್ಥವಾದ ಅಮೃತತ್ವವನ್ನು ಎಂದರೆ ಮೋಕ್ಷವನ್ನು ಪಡೆಯುವ ಸಂಭವವೇ ಹೆಚ್ಚಾಗಿರುವದರಿಂದಲೂ ಬ್ರಹ್ಮಲೋಕವನ್ನು ಅಮೃತತ್ವವೆಂದು ಕರೆಯುತ್ತಾರೆ. ಇದನ್ನರಿತ ವಿವೇಕಿಯು ಅವಿದ್ಯಾರೂಪವಾದ ಕ್ರಿಯಾಕಾರಕಫಲ

"ಹಿರಣ್ಮಯವಾದ ಪಾತ್ರದಿಂದ ಸತ್ಯರೂಪನಾದ ಪರಮಾತ್ಮನ ದ್ವಾರವು ಮುಚ್ಚಿರುತ್ತದೆ. ಈ ಆದಿತ್ಯನಲ್ಲಿರುವ ಪುರುಷನು ಯಾವನೋ ಆ ಇವನೇ ನಾನು. ಓಂ ಆಕಾಶರೂಪವಾದದ್ದು ಬ್ರಹ್ಮವು".

ಕರ್ಮೋಪಾಸನೆಗಳ ಸಮುಚ್ಚಯವನ್ನು ಅನುಷ್ಠಾನಮಾಡುವವರು ತಪ್ಪದೆ ಸಾಯುವವರೆಗೂ ಭಾವನೆಯನ್ನು ಮಾಡುತ್ತಲೇ ಇರಬೇಕು. ಸಾಯುವಾಗಲೂ ತಮ್ಮ ಉಪಾಸ್ಯದೇವತೆಯನ್ನು ಸ್ಮರಿಸುತ್ತಿರಬೇಕು. ಅವರ ಪ್ರಾಣವು ಹೊರಗಿನ ವಾಯುವಿನಲ್ಲಿ ಸೇರಿಹೋಗುವದು. ಸ್ಥೂಲಶರೀರವು ಅಂತ್ಯಕರ್ಮದಿಂದ ಸುಟ್ಟು ಭಸ್ಮವಾಗುವದು. ಆದರೆ ಅವರ ಸೂಕ್ಷ್ಮಶರೀರವು ಮಾತ್ರ ಅವರ ಉಪಾಸನೆಗೆ ತಕ್ಕಂತೆ ಫಲವನ್ನು ಹೊಂದಲು ಅನುವಾಗುವದು. ಅಂಥವರು ತಾವು ಯಾವಾಗಲೂ ಉಪಾಸನೆಮಾಡುತ್ತಿದ್ದ ಅಗ್ನಿಯನ್ನು ಹೀಗೆಂದು ಬೇಡಿಕೊಳ್ಳುವರು. 'ಎಲೈ ಅಗ್ನಿಯೆ, ನೀನು ನನ್ನ ಮನಸ್ಸಿನಲ್ಲಿ ಸಂಕಲ್ಪಸ್ವರೂಪನಾಗಿದ್ದುಕೊಂಡು ನಾನು ಈವರೆಗೂ ಮಾಡಿದ ಕರ್ಮೋಪಾಸನೆಗಳ ಹುರುಳನ್ನು ಬಲ್ಲವನಾಗಿರುತ್ತೀಯೆ. ಅದನ್ನು ಲಕ್ಷ್ಯದಲ್ಲಿಟ್ಟು ನನ್ನ ಅನುಷ್ಠಾನಕ್ಕೆ ತಕ್ಕ ಫಲವನ್ನು ಕೊಡುವ ಉತ್ತಮ ಲೋಕಕ್ಕೆ ಉತ್ತಮವಾದ ಹಾದಿಯಿಂದ ಕರೆದುಕೊಂಡು ಹೋಗುವವನಾಗು. ಬರಿಯ ಕರ್ಮವನ್ನು ಮಾಡಿದವರು ಹೋಗುವ ಧೂಮಮಾರ್ಗದಿಂದ ಕರೆದುಕೊಂಡು ಹೋಗಿ ಮತ್ತೆ ಈ ಲೋಕಕ್ಕೆ ನನ್ನನ್ನು ಮರಳಿಸದಿರು. ನಾನು ಮಾಡಿರುವ ಉತ್ತಮಭಾವನೆಗೆ ತಕ್ಕಂತೆ ದೇವಯಾನವೆಂಬ ಅರ್ಚಿರಾದಿಮಾರ್ಗದಿಂದಲೇ ಕರೆದುಕೊಂಡು ಹೋಗು.'

ಉಪಾಸಕರಿಗೂ ಕರ್ಮಿಗಳಿಗೂ ಇರುವ ಒಂದು ದೊಡ್ಡ ತಾರತಮ್ಯವೇನೆಂದರೆ : ಉಪಾಸಕರಿಗೆ ಸಾಯುವಾಗಲೂ ಮನಸ್ಸು ಸ್ವಾಧೀನದಲ್ಲಿರುತ್ತದೆ. ತಾವು ಮಾಡಿರುವ ಭಾವನೆಗೆ ತಕ್ಕಂತೆ ಉತ್ತಮವಾದ ಲೋಕವೇ ತಮಗೆ ದೊರೆಯುವದೆಂಬ ದೃಢವಾದ ನಂಬಿಕೆಯಿರುತ್ತದೆ. ಭಾವನೆಗೆ ತಕ್ಕಂತೆ ಫಲವಾಗುವದೆಂಬುದು ನಿಯಮವಾದ್ದರಿಂದ ಅದರಂತೆ ಅವರಿಗೆ ಉತ್ತಮವಾದ ಲೋಕವೇ ದೊರೆಯುತ್ತದೆ. ಅವರ ಉಪಾಸನೆಯ ಬಲದಿಂದ ಹಿಂದಿನ ಪಾಪಗಳೆಲ್ಲ ಸುಟ್ಟು ಬೂದಿಯಾಗುವವು. ಆ ಹಿಂದಿನ ಕರ್ಮಗಳಿಗೆ ಮತ್ತೆ ಫಲವನ್ನು ಕೊಡುವ ಯೋಗ್ಯತೆಯೇ ಇಲ್ಲದಂತೆ ಉಪಾಸನೆಯು ತಡೆಗಟ್ಟುವದು. ಉಪಾಸನೆಯು ಬಲಿತಂದಿನಿಂದ ಅವರು ಮಾಡಬಹುದಾದ ಯಾವ ಕರ್ಮದ ಫಲವೂ ಅವರಿಗೆ ಅಂಟುವದಿಲ್ಲ. ಆದ್ದರಿಂದ ಅವರಿಗೆ ಆಗುವ ಫಲವೆಲ್ಲ ಒಂದೇ. ತಾವು ಮಾಡಿರುವ ಬ್ರಹ್ಮಭಾವನೆಯ ಫಲವಾಗಿ ಬ್ರಹ್ಮಲೋಕವನ್ನೇ ಅವರು

ಸೇರಿಬಿಡುತ್ತಾರೆ. ಇದು ಶಾಸ್ತ್ರದ ನಂಬಿಕೆಯಿಂದ ಸಿಕ್ಕುವ ಫಲವು. ಯಾವನು ಶಾಸ್ತ್ರಪ್ರಾಮಾಣ್ಯದಲ್ಲಿ ಭರವಸೆಯುಳ್ಳವನೋ ಅವನು ಮಾತ್ರ ಈ ಭಾವನೆಗೂ ಈ ಭಾವನೆಯಿಂದ ಆಗಬೇಕಾದ ಫಲಕ್ಕೂ ಅಧಿಕಾರಿಯು.

ಈ ಮಂತ್ರವೂ ಮಾಧ್ಯಂದಿನಪಾಠದಂತೆಯೇ ಬರೆದದ್ದು. ಇದರಲ್ಲಿ ಉಪಾಸನೆಯನ್ನು ಉಪಸಂಹಾರಮಾಡಿರುತ್ತದೆಯಾದರೂ ಉಪಕ್ರಮದಲ್ಲಿ ಪ್ರಾರಂಭವಾಗಿದ್ದ 'ಸರ್ವವೂ ಈಶ್ವರನೇ' ಎಂಬ ಜ್ಞಾನದ ತಳಹದಿಯಮೇಲೆಯೇ ಈ ಉಪಾಸನೆಯನ್ನು ಉಪದೇಶಮಾಡಿರುತ್ತದೆ. ಆದ್ದರಿಂದ ಇದರ ಅರ್ಥವನ್ನು ಉಪಾಸನೆಯ ಪರವಾಗಿಯೇ ಅಲ್ಲದೆ ಜ್ಞಾನಪರವಾಗಿಯೂ ವಿವರಿಸಬಹುದಾಗಿರುತ್ತದೆ.

ಪರಮಾತ್ಮನಿಗೆ **ಸತ್ಯ**ನೆಂದು ಹೆಸರು. ಆತನು ಸೂರ್ಯಮಂಡಲದಲ್ಲಿಯೂ ನಮ್ಮ ಒಳಗೂ ಇದ್ದುಕೊಂಡಿರುತ್ತಾನೆ. ಸೂರ್ಯಮಂಡಲದಲ್ಲಿರುವ ಸತ್ಯಪರಮಾತ್ಮನ ರೂಪವನ್ನು ಆ ಮಂಡಲದ ಕಿರಣಗಳ ಪ್ರಕಾಶವು ಮುಚ್ಚಿಕೊಂಡಿರುತ್ತದೆಯೆಂದೂ ಸಾಯುವವರೆಗೂ ಎಡೆಬಿಡದೆ ಉಪಾಸನೆಮಾಡುತ್ತಿರುವ ಸಾಧಕನ ಅನುಗ್ರಹಕ್ಕಾಗಿ ಆತನು ಕಿರಣಗಳನ್ನು ಉಪಸಂಹಾರಮಾಡುವನೆಂದೂ ಆಗಲೇ ಸಾಧಕನು ಸೂರ್ಯಮಂಡಲವನ್ನು ಭೇದಿಸಿಕೊಂಡು ಬ್ರಹ್ಮಲೋಕವನ್ನು ಹೊಂದಿ ಶಾಶ್ವತವಾದ ಸುಖವನ್ನು ಪಡೆಯುತ್ತಾನೆಂದೂ ವೇದವಾದವಿದೆ. ಇದನ್ನು ತಿಳಿಸುವದಕ್ಕಾಗಿಯೇ ಈ ಉಪನಿಷತ್ತಿನ ಕಾಣ್ವಪಾಠದಲ್ಲಿ ಈ ಮಂತ್ರದ ಉತ್ತರಾರ್ಧವು ಹೀಗಿದೆ : ''ತತ್ತ್ವಂ ಪೂಷನ್ನಪಾವೃಣು ಸತ್ಯಧರ್ಮಾಯ ದೃಷ್ಟಯೇ'' ಜ್ಯೋತಿರ್ಮಯವಾದ ಪಾತ್ರೆಯಂತಿರುವ ಈ ಮಂಡಲವು ಸತ್ಯರೂಪವಾದ ಬ್ರಹ್ಮದ ಬಾಗಿಲನ್ನು ಮುಚ್ಚಿರುತ್ತದೆ. ಆದ್ದರಿಂದ 'ಎಲೈ ಪೂಷನೆ, ಪರಮೇಶ್ವರನೆ, ಸತ್ಯರೂಪನಾದ ನಿನ್ನ ಧ್ಯಾನವನ್ನು ಎಡೆಬಿಡದೆ ಮಾಡುತ್ತಿರುವ ನನಗಾಗಿ ಆ ಬಾಗಿಲಿನ ಮುಚ್ಚಳವನ್ನು ತೆಗೆದುಹಾಕು'– ಎಂದು ಆ ಅರ್ಧದ ಅಭಿಪ್ರಾಯವು. ಕಾಣ್ವಪಾಠದಲ್ಲಿ ಈ ಮಂತ್ರದ ಮುಂದೆ ಕಾಣಬರುವ ಮಂತ್ರದ ''ಪೂಷನ್ನೇಕರ್ಷೇ ಯಮ ಸೂರ್ಯ ಪ್ರಾಜಾಪತ್ಯ ವ್ಯೂಹ ರಶ್ಮೀನ್ ಸಮೂಹ ತೇಜಃ। ಯತ್ತೇ ರೂಪಂ ಕಲ್ಯಾಣತಮಂ ತತ್ತೇ ಪಶ್ಯಾಮಿ'' ಎಂಬ ಭಾಗಕ್ಕೂ ಇದೇ ತಾತ್ಪರ್ಯವು. ಉಪಾಸಕನ ಪ್ರಾರ್ಥನೆಯಂತೆ ಪರಮಾತ್ಮನು ಸೂರ್ಯಮಂಡಲದ ರಶ್ಮಿಗಳನ್ನು ಉಪಸಂಹಾರಮಾಡಿದಮೇಲೆ ಅವನು ಆ ಪರಮೇಶ್ವರನ ಅತ್ಯಂತ ಮಂಗಲರೂಪವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಇದನ್ನೇ **'ಶಾಶ್ವತಬ್ರಹ್ಮಲೋಕಾವಾಪ್ತಿ'** ಎಂದು ಶಾಸ್ತ್ರಜ್ಞರು ಕರೆಯುವರು.

ಉಪಾಸನೆಯಲ್ಲಿ ಮತ್ತೊಂದು ವಿಶೇಷವಿದೆ. ಅದೇನೆಂದರೆ : ಉಪಾಸಕನು ಉಪಾಸ್ಯನಾದ ಪರಮೇಶ್ವರನನ್ನು ತನಗಿಂತ ಬೇರೆಯಾಗಿರುವನೆಂದು ಧ್ಯಾನಿಸುವದಿಲ್ಲ. ಆದಿತ್ಯಮಂಡಲದಲ್ಲಿರುವ ಆ ಸತ್ಯನೆಂಬ ಹೆಸರಿನ ಪುರುಷನು ನಾನೇ – ಎಂದು ಅವನು ಧ್ಯಾನಮಾಡುತ್ತಿರುತ್ತಾನೆ. ಧ್ಯಾನವು ಬಲವಾದಂತೆ 'ನಾನೇ ಹಿರಣ್ಯಗರ್ಭನಾದ ಬ್ರಹ್ಮವು' ಎಂಬ ಭಾವನೆಯು ಅತ್ಯಂತ ಬಲವಾಗಲು ಆ ಸಾಕ್ಷಾತ್ಕಾರದ ಬಲದಿಂದಲೇ ಅವನು ಬ್ರಹ್ಮಲೋಕವನ್ನು ಸೇರುತ್ತಾನೆ. ಈ ಧ್ಯಾನದ ಕ್ರಮವನ್ನು ಬೃಹದಾರಣ್ಯಕ, ಛಾಂದೋಗ್ಯ – ಮುಂತಾದ ಉಪನಿಷತ್ತುಗಳಲ್ಲಿ ವಿಸ್ತಾರವಾಗಿ ವರ್ಣಿಸಿರುತ್ತದೆ.

ಈಗ ಒಂದು ವಿಚಾರವನ್ನು ಮನಸ್ಸಿಗೆ ತಂದುಕೊಳ್ಳಬೇಕು. ಶಾಸ್ತ್ರದಲ್ಲಿ ಹೇಳಿದೆ ಎಂಬಿಷ್ಟೇ ಕಾರಣದಿಂದ ಈ ಧ್ಯಾನವನ್ನು ಮಾಡಬೇಕೊ ? ಅಥವಾ ಇದಕ್ಕೆ ಆಧಾರವಾಗಿ ಅನುಭವಗಮ್ಯವಾದ ವಿಷಯವು ಏನಾದರೂ ಇದೆಯೊ ? ಈ ಪ್ರಶ್ನೆಗೆ ಉತ್ತರವನ್ನು ಹೇಳುವದಕ್ಕೆ ಉಪನಿಷತ್ತಿನ ಬೇರೆಯ (ಬೃ.೫–೫–೨) ವಾಕ್ಯಗಳನ್ನು ಸಹಾಯಕ್ಕೆ ತೆಗೆದುಕೊಳ್ಳಬೇಕು. 'ಸತ್ಯರೂಪನಾದ ಈ ಪುರುಷನು ಆದಿತ್ಯಮಂಡಲದಲ್ಲಿರುತ್ತಾನೆ. ನಮ್ಮ ಬಲಗಣ್ಣಿನಲ್ಲಿಯೂ ಇರುತ್ತಾನೆ. ಇವರಿಬ್ಬರೂ ಒಬ್ಬರನ್ನೊಬ್ಬರು ಆಶ್ರಯಿಸಿರುತ್ತಾರೆ' ಎಂದು ಅಲ್ಲಿ ವಿವರಿಸಿರುತ್ತದೆ. ಸೂರ್ಯಮಂಡಲದ ಕಿರಣವಿಲ್ಲದೆ ನಮ್ಮ ಕಣ್ಣು ನೋಡಲಾರದು. ನಮ್ಮ ಕಣ್ಣಿನಿಂದ ನಾವು ನೋಡದ ಹೊರತು ಸೂರ್ಯನಿದಾನೆಂದು ತಿಳಿಯುವದಕ್ಕಾಗುವದಿಲ್ಲ. ಹೀಗೆ ನಮ್ಮ ಕಣ್ಣೂ ಸೂರ್ಯಮಂಡಲವೂ ಒಂದಕ್ಕೊಂದು ಉಪಕಾರಕಗಳಾಗಿರುವದನ್ನು ನೋಡಿದರೆ ಒಬ್ಬ ಪುರುಷನ ಕೈ ಕಾಲುಗಳೇ ಮುಂತಾದ ಅವಯವಗಳು ಬೇರೆಬೇರೆಯಾಗಿರುವಂತೆ ಕಂಡರೂ ಅವುಗಳು ಒಂದಕ್ಕೊಂದು ಸೇರಿಕೊಂಡು ಒಬ್ಬನೇ ಪುರುಷನಿಗೆ ಸಹಾಯಕವಾಗಿರುವಂತೆ ಅವುಗಳಿರುವವೆಂದೂ ಆದ್ದರಿಂದ ಸೂರ್ಯಮಂಡಲದಲ್ಲಿಯೂ ನಮ್ಮೊಳಗೂ ಇರುವ ಪುರುಷನು ಒಬ್ಬನೇ ಎಂದೂ ಹೇಳಬೇಕಾಗುತ್ತದೆ.

ಇನ್ನು ಉಪಾಸನಾದೃಷ್ಟಿಯನ್ನು ಸ್ವಲ್ಪ ಬದಿಗಿರಿಸಿ ಜ್ಞಾನದೃಷ್ಟಿಯಿಂದ ನೋಡಿದರಂತೂ ನಮ್ಮ ದೇಹೇಂದ್ರಿಯಮನೋಬುದ್ಧ್ಯಹಂಕಾರಗಳಿಗೆ ಸಾಕ್ಷಿಯಾಗಿರುವ ಆತ್ಮನು ನಮ್ಮ ಒಬ್ಬರ ಆತ್ಮನೇ – ಎಂದು ಹೇಳುವದಕ್ಕೆ ಯಾವ ಆಧಾರವೂ ಕಂಡುಬರುವದಿಲ್ಲ. ಅರಿಯಲ್ಪಡುವ ದೇಹೇಂದ್ರಿಯಾದಿಗಳ ಯಾವದೊಂದು ಧರ್ಮವೂ ಆತ್ಮನಲ್ಲಿರುವದಿಲ್ಲ. ಅವನು ದೇಹೇಂದ್ರಿಯಗಳ ಆಧಾರದಿಂದಲೂ ಇರುವದಿಲ್ಲ. ಆದ್ದರಿಂದ ಈ ದೃಷ್ಟಿಯಲ್ಲಿ ಒಬ್ಬ ಆತ್ಮನೇ ನಮ್ಮ

ದೇಹಾದಿಗಳಿಗೂ ಮಿಕ್ಕ ಎಲ್ಲಾ ದೇಹಾದಿಗಳಿಗೂ ಆತ್ಮನಾಗಿರುತ್ತಾನೆ. ಅವನೇ ಸ್ವತಂತ್ರನಾಗಿರುವ ಈಶ್ವರನು. ಅವನೇ ಸೂರ್ಯಮಂಡಲಾದಿಗಳಲ್ಲಿಯೂ ಆತ್ಮನಾಗಿರುವವನು – ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ನೋಡುವಾಗ ಪರಮಾತ್ಮನೇ ಪರಮಾರ್ಥವಾಗಿ ಸತ್ಯವಾಗಿರುವವನು. ಅವನ ಸತ್ಯತೆಯನ್ನನುಸರಿಸಿಕೊಂಡು ದೃಶ್ಯವಾದ ಸಕಲ ಜಗತ್ತೂ ತನ್ನ ಇರವನ್ನು ಸಂಪಾದಿಸಿಕೊಂಡಿರುತ್ತದೆ – ಎಂದು ಹೇಳಬೇಕಾಗುತ್ತದೆ. ಆದ್ದರಿಂದಲೇ ತೈತ್ತಿರೀಯಶ್ರುತಿಯಲ್ಲಿ 'ಈ ಮನುಷ್ಯನಲ್ಲಿರುವ ಆತ್ಮನೂ ಸೂರ್ಯನಲ್ಲಿರುವ ಆ ಆತ್ಮನೂ ಒಬ್ಬನೇ' ಎಂದು ಸ್ಪಷ್ಟವಾಗಿ ಹೇಳಿಬಿಟ್ಟಿರುತ್ತದೆ. ಹೀಗೆ ನೋಡಿದರೆ ಸೂರ್ಯಮಂಡಲವಾಗಲಿ ನಮ್ಮ ದೇಹಾದಿಗಳಾಗಲಿ ಆತನಿಗೆ ಮುಚ್ಚಿಕೆಯಾಗಿರುವದಿಲ್ಲ. ಅವನು ತಾನೇತಾನಾಗಿ ಎಲ್ಲೆಲ್ಲಿಯೂ ಬೆಳಗುತ್ತಾ ಎಲ್ಲವನ್ನೂ ವ್ಯಾಪಿಸಿಕೊಂಡು ಎಲ್ಲಕ್ಕೂ ತನ್ನ ಬೆಳಕಿನ ಇರವನ್ನೂ ತೋರಿಕೆಯನ್ನೂ ಕೊಟ್ಟು ಅನುಗ್ರಹಿಸುತ್ತಿದ್ದಾನೆ. ಈ ಅಭಿಪ್ರಾಯವನ್ನೇ ಈ ಉಪನಿಷತ್ತಿನ ಆದಿಯಲ್ಲಿ ''ಈಶಾವಾಸ್ಯಮಿದಗ್ಂ ಸರ್ವಮ್'' (ಇದೆಲ್ಲವೂ ಈಶ್ವರನಿಂದ ಮುಚ್ಚಲ್ಪಡತಕ್ಕದ್ದು) ಎಂದು ಹೇಳಿರುತ್ತದೆ.

ಈ ಮಂತ್ರದಲ್ಲಿ ಕೊಟ್ಟಿರುವ 'ಓಂ ಖಂ ಬ್ರಹ್ಮ' ಎಂಬ ಉಪಾಸನೆಗೂ ಇದೇ ಅರ್ಥ. ಬ್ರಹ್ಮವು ಓಂಕಾರಪ್ರತಿಪಾದ್ಯವಾಗಿರುತ್ತದೆ. ಓಂಕಾರವು ವಾಚಕವನ್ನೆಲ್ಲ ವ್ಯಾಪಿಸಿರುವದರಿಂದ ಸರ್ವಶಬ್ದವಾಚ್ಯವೂ ನಿಜವಾಗಿ ಬ್ರಹ್ಮವೂ ಆಗಿರುತ್ತದೆ. ಇಷ್ಟೇ ಅಲ್ಲ, ಖಂ ಎಂದರೆ ಆಕಾಶರೂಪವಾದದ್ದು ಬ್ರಹ್ಮವು. ಅದು ಆಕಾಶದಂತೆ ನಿರ್ವಿಕಾರವಾಗಿ ನಿಷ್ಕ್ರಿಯವಾಗಿ ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುತ್ತದೆ– ಎಂದು ಉಪಾಸಕನು ಚಿಂತಿಸಬೇಕು.

ಈಶಾವಾಸ್ಯೋಪನಿಷತ್ತು ಆಕಾರದಲ್ಲಿ ಚಿಕ್ಕದಾದರೂ ಬಹಳ ಅರ್ಥಗರ್ಭಿತವಾಗಿದೆ. ಕರ್ಮನಿಷ್ಠೆ, ಜ್ಞಾನನಿಷ್ಠೆಗಳೆರಡರ ಪ್ರಸ್ತಾಪವೇ ಪ್ರಾರಂಭದಲ್ಲಿ ಕಂಡುಬಂದರೂ ನಡುವೆ ಉಪಾಸನೆಯ ವಿಚಾರವೂ ಸೇರಿ ತ್ರಿವೇಣಿಸಂಗಮವಾಗಿದೆ. ಮಂದಾಧಿಕಾರಿಗಳಿಗೆ ಕೇವಲ ಕರ್ಮ, ಮಧ್ಯಮಾಧಿಕಾರಿಗಳಿಗೆ ಉಪಾಸನೆ, ಉತ್ತಮಾಧಿಕಾರಿಗಳಿಗೆ ಜ್ಞಾನ– ಎಂಬಿದು ಸಾಮಾನ್ಯವಾಗಿ ವೇದಾಂತಶಾಸ್ತ್ರದಲ್ಲಿ ಒಪ್ಪಿರುವ ಸಾಧನತ್ರಯಗಳೆನಿಸಿವೆ. ಆದರೆ ಇಲ್ಲಿ ನಾಲ್ಕನೆಯದಾದ ಕರ್ಮೋ–ಪಾಸನಾಸಮುಚ್ಚಯವನ್ನು ಪ್ರಸ್ತಾಪಿಸಿದೆ. ಉಪಾಸನೆಯು ಅಂತರಂಗಸಾಧನವೇ ಆಗಿದ್ದು ಬಹಿರಂಗವಾದ ಕರ್ಮದೊಡನೆ ಸಮುಚ್ಚಿತವಾಗುವದು ಹೇಗೆ ? ಎಂಬ ಸಂಶಯವುಂಟಾಗುತ್ತದೆಯಾದರೂ ಕರ್ಮದ ಮೆಟ್ಟಿಲಿನಿಂದ ಕೂಡಲೆ ಉಪಾಸನೆಗೆ

ಏರುವದು ಕಷ್ಟವಾದ್ದರಿಂದ ಕರ್ಮವನ್ನು ಬಿಡದೆ, ಉಪಾಸನೆಯನ್ನು ಸಾಧಿಸುವ ತಂತ್ರವನ್ನು ಇಲ್ಲಿ ತಿಳಿಸಿ ಇದು ಕೇವಲೋಪಾಸನೆಗಿಂತ ಸುಲಭವೆಂಬುದನ್ನೂ ಸೂಚಿಸಲಾಗಿದೆ. ಕರ್ಮಕಾಂಡದಲ್ಲಿಯೂ ಹೀಗೆಯೇ ನಡುನಡುವೆ ಉಪಾಸನೆಗಳನ್ನು ಹೇಳಿ ಕರ್ಮದೊಡನೆ ಅನುಷ್ಠಾನಮಾಡಬೇಕೆಂದು ತಿಳಿಸಿರುತ್ತದೆ. ಇವುಗಳನ್ನು ಕರ್ಮಾಂಗೋಪಾಸನೆಗಳೆನ್ನುವರು. ಆದರೆ ಇಲ್ಲಿ ಆದಿತ್ಯಮಂಡಲಾಂತರ್ಗತನಾದ ಸತ್ಯನೆಂಬ ಹೆಸರಿನ ಪರಮಾತ್ಮನ ಉಪಾಸನೆಯನ್ನು ಕರ್ಮನಿಷ್ಠನಾದವನು ತಾನು ವಯೋಧರ್ಮದಿಂದ ಕರ್ಮಗಳನ್ನು ಮಾಡಲು ಅಶಕ್ತನಾದಾಗ ಮನೋಬಲವನ್ನು ವೃದ್ಧಿಮಾಡಿಕೊಂಡಿದ್ದು ಆ ಸಮಯದಲ್ಲಿ ಅದೇ ದೇವತೆಯನ್ನು ಚಿಂತಿಸುತ್ತಾ ದೇಹತ್ಯಾಗಮಾಡಿ ಆ ದೇವತಾಸಾಯುಜ್ಯವನ್ನು ಪಡೆಯಬೇಕೆಂದು ವಿಧಿಸಿರುತ್ತದೆ. ಈ ಫಲವು ಅಮೃತವೆಂದು ಹೊಗಳಲ್ಪಟ್ಟರೂ ಮುಖ್ಯಾಮೃತವಲ್ಲವೆಂದು ಉಪಾಸಕನಿಗೆ ಆ ಮಟ್ಟದಲ್ಲಿ ಅರಿವಾಗುತ್ತದೆ. ಆಗ ಅವನು ತನ್ನ ಆತ್ಮನೇ ಆಗಿರುವ ಬ್ರಹ್ಮವನ್ನರಿಯಲು ಪ್ರಯತ್ನಮಾಡಿ ಬ್ರಹ್ಮಲೋಕದಲ್ಲಿಯೇ ಜ್ಞಾನವನ್ನು ಪಡೆದು ಮುಕ್ತನಾಗುತ್ತಾನೆ. ಇದನ್ನು ಕ್ರಮಮುಕ್ತಿ ಎನ್ನುತ್ತಾರೆ. ಹೀಗೆ ಇಲ್ಲಿ ಆರಂಭದಲ್ಲಿ ಜ್ಞಾನನಿಷ್ಠೆಯಿಂದ ಸದ್ಯೋಮುಕ್ತಿಯನ್ನೂ ಕಡೆಯಲ್ಲಿ ಕ್ರಮಮುಕ್ತಿಯನ್ನೂ ಪ್ರತಿಪಾದಿಸಿರುತ್ತದೆ.

ಉಪನಿಷತ್ತಿನ ಸರ್ವಸ್ವವನ್ನೂ ಓಂ ಖಂ ಬ್ರಹ್ಮ ಎಂಬ ಮೂರು ವ: ತುಗಳಲ್ಲಿ ಅಡಗಿಸಿಬಿಡಬಹುದು. ಬ್ರಹ್ಮವು, ಪರಮೇಶ್ವರನು ಅಥವಾ ಪರಮಾತ್ಮನು ಒಂದೇ ಒಂದು ಪರಮಾರ್ಥತತ್ತ್ವವು. ಆತನೇ ವಾಯ್ವಾದಿಸಕಲಭೂತಗಳಿಗೂ ಆಕಾಶವು ಆಧಾರವಾಗಿರುವಂತೆ ಆಕಾಶಾದಿಸಮಸ್ತಜಗತ್ತಿಗೂ ಆಧಾರವಾಗಿರುವ ಅದೆಲ್ಲದರ ತಿರುಳು. ಆತನನ್ನು ಬಿಟ್ಟರೆ ಈ ಜಗತ್ತಿಗೆ ಸಾರವಿಲ್ಲ, ಇರವಿಲ್ಲ. ಇದನ್ನು ತಿಳಿದರೆ ಸಕಲವಾಚ್ಯಪ್ರಪಂಚದ ತತ್ತ್ವವನ್ನೂ ಅದರ ಪರಮಾರ್ಥರೂಪದಿಂದ ತಿಳಿದಂತಾಯಿತು. ಇದೇ ವೇದಾಂತಜ್ಞಾನವು. ಯಾವನಿಗೆ ಈ ಜ್ಞಾನದಲ್ಲಿ ಅಧಿಕಾರವಿಲ್ಲವೋ ಇದನ್ನು ಅರಿತು ಆನಂದವನ್ನನುಭವಿಸುವ ಯೋಗವಿಲ್ಲವೋ ಅವನು ಎಡೆಬಿಡದೆ ಪರಮೇಶ್ವರನ ಉಪಾಸನೆಯನ್ನು ಮಾಡಿ ಕ್ರಮವಾಗಿ ಈ ಮಟ್ಟಕ್ಕೆ ಏರಬೇಕು. ಯಾರಿಗೆ ಈ ಉಪಾಸನೆಗೂ ಅಧಿಕಾರವಿಲ್ಲವೋ ಅವರು ನಿಷ್ಕಾಮಕರ್ಮವನ್ನು ಮಾಡುತ್ತಾ ಉಪಾಸನೆಗೆ ಯೋಗ್ಯತೆಯನ್ನು ಸಂಪಾದಿಸಿಕೊಳ್ಳಬೇಕು. ಹೀಗೆ ಕರ್ಮಗಳನ್ನು ಮಾಡುತ್ತಿರುವದೆಂಬ ಪ್ರವೃತ್ತಿಮಾರ್ಗ, ಜ್ಞಾನವನ್ನು ಸಂಪಾದಿಸಿಕೊಳ್ಳುವದೆಂಬ ನಿವೃತ್ತಿಮಾರ್ಗ— ಈ ಎರಡೇ ಶಾಸ್ತ್ರೋಪದೇಶದ ಸಾರವೆಂಬುದು ಉಪನಿಷತ್ತಿನ ಬೋಧೆಯಾಗಿದೆ.

ಹರಿಃ ಓಂ ತತ್ಸತ್